ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

# ಅರಸೀಕೆರೆ


ಪ್ರಧಾನ ಸಂಪಾದಕರು

**ಡಾ. ಬಿ. ವಿ. ವಸಂತಕುಮಾರ್**

ಸಂಪಾದಕರು

**ಡಾ. ಎಸ್. ಜಿ. ರಾಮದಾಸ ರೆಡ್ಡಿ**

ಲೇಖಕರು

**ಡಾ. ಮಂಜುನಾಥ ಜಿ. ಆರ್.**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**ARSIKERE:** An Introducing Book on the Places in Karnataka that Played a Major Role in the Freedom Struggle, Written by Dr. Manjunath G.R., Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
೧. ಡಾ. ಎಸ್. ಜಿ. ರಾಮದಾಸ ರೆಡ್ಡಿ
೨. ಡಾ. ಮೃತ್ಯುಂಜಯ ರುಮಾಲೆ
೩. ಶ್ರೀ ನರೇಂದ್ರಕುಮಾರ್ ಎಸ್.ಎಸ್.
೪. ಡಾ. ಪ್ರಕಾಶ ಗ. ಖಾಡೆ
೫. ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಣ : ೨೦೨೨
ಪ್ರತಿಗಳು : ೧೦೦೦
ಬೆಲೆ : ರೂ. ೩೦/-
ಪುಟ : ೫೬

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೮೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಫಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು.



ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ, ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಭಾರತದ ರಾಷ್ಟ್ರೀಯ ಚಳವಳಿಯ ಇತಿಹಾಸ ಅತ್ಯಂತ ಆಕರ್ಷಣೀಯವೂ, ರೋಚಕವೂ ಹಾಗೂ ರೋಮಾಂಚನಕಾರಿಯೂ ಆಗಿದ್ದು, ಅದರಲ್ಲಿ ಕರ್ನಾಟಕದ ಪಾತ್ರವು ಅತ್ಯಂತ ಪ್ರಮುಖವಾಗಿದೆ. ಭಾರತದ ಬೇರೆ ಬೇರೆ ರಾಜ್ಯಗಳ ಹೋರಾಟದಂತೆಯೇ ಕರ್ನಾಟಕದ ಹೋರಾಟವು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ. ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷರ ವಿರುದ್ಧದ ಹೋರಾಟದ ಮನೋಭಾವ ಉಳಿದೆಲ್ಲಾ ಭಾಗಗಳಿಂತ ಕೊನೆಗೆ ಹುಟ್ಟಿಕೊಂಡರೂ ಅತ್ಯಂತ ಪರಿಣಾಮಕಾರಿಯು ಹೋರಾಟಗಳನ್ನು ಸಂಘಟಿಸಿ ರಾಷ್ಟ್ರ ನಾಯಕರ ಗಮನ ಸೆಳೆಯುವ ಯಶಸ್ವಿಯಾಗಿ ಮೆಚ್ಚುಗೆಗೂ ಪಾತ್ರರಾದರು. ಅರಸೀಕೆರೆಯು ಭಾಗವು ಹಾಸನ ಜಿಲ್ಲೆಯ ಬಯಲು ಪ್ರದೇಶದ ವ್ಯಾಪ್ತಿಯಯಲ್ಲಿರುವ ಒಂದು ತಾಲ್ಲೂಕು ಕೇಂದ್ರವಾಗಿದ್ದು, ೧೯೧೩ರಲ್ಲಿ ಸರ್.ಎಂ ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಅರಸೀಕೆರೆಯಿಂದ ಮೈಸೂರು ರೈಲ್ವೆ ಸಂಚಾರ ಆರಂಭಗೊಂಡು ಅರಸೀಕೆರೆ ರೈಲ್ವೆ ನಿಲ್ದಾಣವು ಉತ್ತರ ಕರ್ನಾಟಕ ಹಾಗೂ ಮೈಸೂರು ಭಾಗದ ರಾಜಕೀಯ ನಾಯಕರುಗಳ ಜಂಕ್ಷನ್ ಕೂಡ ಆಗಿ ಆನೇಕ ನಾಯಕರ ಆಗಮನದಿಂದ ಈ ಭಾಗದಲ್ಲಿ ರಾಷ್ಟ್ರೀಯ ಮನೋಭಾವ ಬೆಳೆಯುವಂತೆ ಮಾಡಿತು. ಹಾಗೂ ಗಾಂಧೀಜಿಯವರ ಭೇಟಿಯ ನಂತರ ಈ ಭಾಗದಲ್ಲಿ ಹೋರಾಟ ತೀವ್ರಗೊಂಡಿತು. ಈ ಭಾಗದ ನಾಯಕರುಗಳಾದ ಹಾರನಹಳ್ಳಿ ರಾಮಸ್ವಾಮಿ, ಡಿ. ವಿ. ರಾಮಸ್ವಾಮಿ, ಮುಂತಾದವರು ರಾಜ್ಯಮಟ್ಟದ ನಾಯಕರಾಗಿದ್ದರು. ಕೆ. ವಿ. ರಾಮಸ್ವಾಮಿ ಎಂಬುವರು ೧೯೩೯ರ ಅರಸೀಕೆರೆಯ ಮೈಸೂರು ಕಾಂಗ್ರೆಸ್ ೭ ನೇ ಅಕ್ಟೋಬರ್ ನೇಮಕಗೊಂಡಿರುವುದು ಹೆಮ್ಮೆಯ ವಿಷಯ. ಅರಸೀಕೆರೆಯ ರಾಮಸ್ವಾಮಿ ಎಂಬ ವಿದ್ಯಾರ್ಥಿಯು ಮೈಸೂರಿನ ಹಾರ್ಡ್ವಿಕ್ ಶಾಲೆಯಲ್ಲಿ ಓದುತ್ತಿದ್ದಾಗ ೧೯೪೭ರ ಅರಮನೆ ಸತ್ಯಾಗ್ರಹದ ವೇಳೆ ಪೊಲೀಸ್ ಗುಂಡಿಗೆ ಬಲಿಯಾಗಿ ಹುತಾತ್ಮರಾಗಿದ್ದು ಅವರ ಸ್ಮರಣಾರ್ಥವಾಗಿ

ಅವರು ಮಡಿದ ಸ್ಥಳವನ್ನು ಮೈಸೂರಿನ ರಾಮಸ್ವಾಮಿ ಸರ್ಕಲ್ ಎಂದು ನಾಮಕರಣ ಮಾಡಿ ಇಂದಿಗೂ ಅರಸೀಕೆರೆ ವಿದ್ಯಾರ್ಥಿ ರಾಮಸ್ವಾಮಿಯವರನ್ನು ಸ್ಮರಿಸುತ್ತಿರುವುದು ಹೆಮ್ಮೆಯ ವಿಷಯವೇ ಸರಿ.

ಭಾರತ ಸ್ವಾತಂತ್ರ್ಯದ ೭೫ ನೇ ವರ್ಷಾಚರಣೆಯ ಈ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟದ ಬಗ್ಗೆ ೭೫ ಕಿರು ಪುಸ್ತಕಗಳನ್ನು ಹೊರತರುತ್ತಿರುವುದು ಅತ್ಯಂತ ಸಂತಸದ ವಿಷಯ. ಈ ಪುಸ್ತಕಗಳಲ್ಲಿ ಪ್ರಕಟವಾಗುವ ವಿಷಯಗಳು ನಾಡಿನ ಯುವ ಜನತೆಗೆ ಸ್ಫೂರ್ತಿ ತುಂಬಿ ನಾಡು, ನುಡಿ, ಸಂಸ್ಕೃತಿ, ಸ್ವಾತಂತ್ರ್ಯದ ಬಗ್ಗೆ ಅಭಿಮಾನ ಮೂಡಲಿ ಎಂಬುದು ನನ್ನ ಆಶಯ.

ಸ್ಥಳ:–ಮೈಸೂರು
ದಿನಾಂಕ:–೨೪.೧೨.೨೦೨೧

**ಡಾ. ಮಂಜುನಾಥ ಜಿ.ಆರ್**
ಇತಿಹಾಸ ಸಹಾಯಕ ಪ್ರಾಧ್ಯಾಪಕರು
ಇತಿಹಾಸ ಸ್ನಾತಕೋತ್ತರ ಅಧ್ಯಯನ ಕೇಂದ್ರ
ಮಹಾರಾಣಿ ಮಹಿಳಾ ಪ್ರಥಮ ದರ್ಜೆ ಕಾಲೇಜು,
ಮೈಸೂರು.

## ಪರಿವಿಡಿ

ಶುಭ ಸಂದೇಶ ೩
ಶುಭ ಸಂದೇಶ ೫
ಪ್ರಧಾನ ಸಂಪಾದಕರ ಮಾತು ೭
ಲೇಖಕರ ಮಾತು ೧೧
ಸ್ವಾತಂತ್ರ್ಯ ಚಳವಳಿಯಲ್ಲಿ ಅರಸೀಕೆರೆ ೧೫
ಆಧಾರ ಗ್ರಂಥಗಳು ೫೨
ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೫೩

# ಸ್ವಾತಂತ್ರ್ಯ ಚಳವಳಿಯಲ್ಲಿ ಅರಸೀಕೆರೆ

ಇತ್ತೀಚಿನ ದಿನಗಳಲ್ಲಿ ಇತಿಹಾಸ ವಿಷಯದಲ್ಲಿ ಸಮಗ್ರ ಅಧ್ಯಯನಕ್ಕಿಂತ ಸೂಕ್ಷ್ಮ ಅಧ್ಯಯನ, ಪ್ರಾದೇಶಿಕ ಅಧ್ಯಯನ ಹೆಚ್ಚು ಪ್ರಾಮುಖ್ಯತೆ ಪಡೆದು ಕೊಂಡಿದೆ. ಪ್ರಾದೇಶಿಕ ಇತಿಹಾಸ ರಚನೆಯಲ್ಲಿ ಸೂಕ್ಷ್ಮ ಅಧ್ಯಯನ ವ್ಯಕ್ತಿ ಆಧಾರಿತ ಇತಿಹಾಸದಲ್ಲಿ ಸಂಶೋಧನೆಗಳನ್ನು ನಡೆಸುವುದರಿಂದ ತೆರೆಯ ಮರೆಯಲ್ಲಿರುವ ಅನೇಕ ಸತ್ಯ ಘಟನೆಗಳನ್ನು ಸತ್ಯ ಸಂಗತಿಗಳನ್ನು ಹೊರತರಲು ಸಾಧ್ಯವಾಗುತ್ತದೆ. ಹೀಗೆ ಪ್ರಾದೇಶಿಕ ಇತಿಹಾಸದಲ್ಲಿ ವ್ಯಕ್ತಿ ಆಧಾರಿತ ಅಧ್ಯಯನಗಳು ಇತಿಹಾಸ ಆಸಕ್ತರಿಂದ, ಸಂಶೋಧಕರಿಂದ ಹೊರಬಂದರೆ ಸಮಗ್ರ ಅಧ್ಯಯನಕ್ಕೆ ಹೊಸ ಆಯಾಮವು ದೊರೆತಂತಾಗುತ್ತದೆ. ಈ ಸಂಶೋಧನಾ ಪ್ರಬಂಧವು ಪ್ರಾದೇಶಿಕ ಇತಿಹಾಸದಲ್ಲಿ ಸೂಕ್ಷ್ಮ ಅಧ್ಯಯನವಾಗಿದ್ದು ಇಲ್ಲಿ ಒಂದು ಪ್ರದೇಶದ ಪರಿಚಯದ ಪ್ರಯತ್ನ ನಡೆಸಿದ್ದೇನೆ. ಪ್ರಸ್ತುತ ಅಧ್ಯಯನದಲ್ಲಿ ಇತಿಹಾಸದ ತೆರೆಯ ಮರೆಯ ಒಳಗೆ ಸದ್ದಿಲ್ಲದಂತೆ ಸಮಾಜ ನಿರ್ಮಾಣದಲ್ಲಿ ಮಹತ್ತರವಾದ ಪಾತ್ರ ನಿರ್ವಹಿಸಿರುವ ನಾಯಕರುಗಳು ಮತ್ತು ತೆರೆಮರೆಯಲ್ಲಿರುವ ಪ್ರದೇಶಗಳ ಮೇಲೆ ಚರ್ಚೆ ನಡೆಸಿದ್ದೇನೆ. ಇಂತಹ ಐತಿಹಾಸಿಕ ವಿಚಾರಗಳನ್ನು ಕುರಿತು ಚರ್ಚಿಸುವಾಗ ವಸ್ತುನಿಷ್ಠವಾದ ವಿಚಾರಗಳನ್ನು ಬಹಿರಂಗಪಡಿಸುವ ಪ್ರಯತ್ನ ಮಾಡಿದ್ದೇನೆ.

ಇದಕ್ಕಾಗಿ ಹಲವು ವಿಧಾನದ ಮೂಲಕ ಮಾಹಿತಿ ಸಂಗ್ರಹಿಸಿ ವಿಮರ್ಶಾತ್ಮಕವಾಗಿ ರಚಿಸುವ ಪ್ರಯತ್ನ ನಡೆಸಿದ್ದೇನೆ. ಈ ನನ್ನ ಸಂಶೋಧನಾ ವಿಷಯಕ್ಕೆ ಮಾಹಿತಿ ಸಂಗ್ರಹಿಸಲು ನಾನು ಕೇಂದ್ರ ಪತ್ರಗಾರ ಇಲಾಖೆ, ನವದೆಹಲಿ, ತಮಿಳುನಾಡು ಪತ್ರಗಾರ ಇಲಾಖೆ, ಎಗಮೊರ, ಚೆನ್ನೈ, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ವಿಧಾನಸೌಧ, ಬೆಂಗಳೂರು, ಪ್ರಾದೇಶಿಕ ಪತ್ರಗಾರ ಇಲಾಖೆ, ಮೈಸೂರು. ಐ.ಸಿ.ಹೆಚ್.ಆರ್. ಪ್ರಾದೇಶಿಕ ಕಚೇರಿಯ ಗ್ರಂಥಾಲಯ, ಗೋಖಲೆ ಇನ್ಸ್‌ಸ್ಟಿಟ್ಯೂಟ್ ಆಫ್ ರಿಸರ್ಚ್, ಬೆಂಗಳೂರು, ಸರ್ಕಾರಿ ಕಾಗದ ಪತ್ರಗಳು, ಆಡಳಿತ ಕಡತಗಳು, ಸರ್ಕಾರಿ ಆಯೋಗದ ವರದಿಗಳು, ಸಮಕಾಲೀನ

ವೃತ್ತಪತ್ರಿಕೆಗಳು, ವಾರಪತ್ರಿಕೆಗಳು, ಕರ್ನಾಟಕ ಲೆಜಿಸ್ಲೇಟಿವ್ ಅಸೆಂಬ್ಲಿಯ ಚರ್ಚೆಗಳು, ಸ್ವರಚಿತ ಕೃತಿಗಳು, ಪತ್ರಿಕೆಗಳಲ್ಲಿನ ಸಂಪಾದಕೀಯ ಬರವಣಿಗೆಗಳನ್ನು ಬಳಸಿಕೊಂಡು ವಿಶ್ಲೇಷಣಾತ್ಮಕ ಅಧ್ಯಯನ ನಡೆಸಿದ್ದೇನೆ. ಅದರ ಜೊತೆಗೆ ಸಂಯುಕ್ತ ಕರ್ನಾಟಕ ಕಚೇರಿ, ಹುಬ್ಬಳ್ಳಿ, ಮಿಥಿಕ್ ಸೊಸೈಟಿ ಗ್ರಂಥಾಲಯ, ಬೆಂಗಳೂರು. ಲೋಕ ಶಿಕ್ಷಣ ಟ್ರಸ್ಟ್ ಕಚೇರಿಗಳಿಂದ ಮಾಹಿತಿ ಸಂಗ್ರಹಿಸಿ, ಹಾಸನ ಮತ್ತು ಅರಸಿಕೆರೆಯ ಸಮಕಾಲೀನ ಹಾಸನ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರನ್ನು ಸಂಪರ್ಕಿಸಿ ಸಂದರ್ಶನ ನಡೆಸಿ ಅಗತ್ಯ ಮಾಹಿತಿಗಳನ್ನು ಕಲೆ ಹಾಕಿದ್ದೇನೆ.

'ಸಿಂಹಾಸನಪುರಿ' ಎಂದೇ ಖ್ಯಾತವಾಗಿ, ಅತ್ಯಂತ ಪ್ರಾಚೀನ ಕಾಲದಿಂದಲೂ ಕರ್ನಾಟಕ ರಾಜ್ಯದ ಐತಿಹಾಸಿಕ, ರಾಜಕೀಯ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಬಹಳ ಪ್ರಮುಖವಾದ ಹಾಗೂ ನಿರ್ಣಾಯಕವಾಗಿರುವ ಮತ್ತು ಕಲೆ, ಸಂಸ್ಕೃತಿ, ಸಾಹಿತ್ಯ ಹಾಗೂ ಹೋರಾಟದ ಕೇಂದ್ರದಂತಿರುವ ಹಾಸನ ಜಿಲ್ಲೆ ಕರ್ನಾಟಕದ ಇತಿಹಾಸದಲ್ಲಿ ಬಹಳ ವಿಶಿಷ್ಟವಾದ ಮತ್ತು ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಹಾಸನ ಜಿಲ್ಲೆಯು ಭೌಗೋಳಿಕವಾಗಿ ದೇಶದಲ್ಲೆ ವಿಶಿಷ್ಟವಾದ ಗುಣಲಕ್ಷಣಗಳನ್ನು ಹೊಂದಿದೆ. ಕಾರಣ ಈ ಜಿಲ್ಲೆಯ ಭೌಗೋಳಿಕ ಮೇರೆಯು ಸಕಲೇಶಪುರ ಮತ್ತು ಬೇಲೂರು ಭಾಗಗಳಲ್ಲಿ ವಿಶ್ವದ ವಿಶಿಷ್ಟ ಅರಣ್ಯ ಪ್ರದೇಶ ಎಂದು ಪರಿಗಣಿಸಲ್ಪಟ್ಟಿರುವ ಪಶ್ಚಿಮಘಟ್ಟ ಪ್ರದೇಶದ ಅಪ್ಪಟ ಮಲೆನಾಡಿನ ಆಹ್ಲಾದಕರ ವಾತಾವರಣವನ್ನು ಹೊಂದಿದೆ. ಅದೇ ರೀತಿ ಅರಸೀಕೆರೆ, ಚನ್ನರಾಯಪಟ್ಟಣಗಳ ಪ್ರದೇಶದಲ್ಲಿ ಬಯಲು ಪ್ರದೇಶವನ್ನು ಹೊಂದಿದ್ದರೆ, ಹಾಸನ, ಆಲೂರು ಸುತ್ತ ಮುತ್ತ ಅರೆಮಲೆನಾಡು ವಾತಾವರಣವನ್ನು ಹೊಂದಿದೆ. ಹೀಗೆ ಒಂದೇ ಜಿಲ್ಲೆ ಮಲೆನಾಡು, ಅರೆಮಲೆನಾಡು ಹಾಗೂ ಬಯಲುಸೀಮೆ ವಾತಾವರಣವನ್ನು ಹೊಂದಿರುವುದಲ್ಲದೆ ವರ್ಷದ ೩೬೫ ದಿನಗಳಲ್ಲಿ ಏಕರೀತಿಯ ಆಹ್ಲಾದಕರ ವಾತಾವರಣವನ್ನು ಹೊಂದಿ ಬಡವರ ಊಟಿ ಎಂದು ಹೆಸರಾಗಿದೆ.

ಹಾಸನ ಜಿಲ್ಲೆಯ ಪ್ರಾಚೀನ ಇತಿಹಾಸ ಪುರಾಣಗಳ ಹಾಗೂ ಮಹಾಕಾವ್ಯಗಳ ಕಾಲಕ್ಕೆ ಬೆಸೆದು ಕೊಂಡಿದೆ. ನಮಗೆ ದೊರೆತಿರುವ ಜಾನಪದ ಕಥೆಗಳು ಹಾಗೂ ಐತಿಹ್ಯಗಳ ಮಾಹಿತಿಯನ್ನು ಆಧರಿಸಿ ಹೇಳುವುದಾದರೆ ಅರ್ಜುನನ ಮೊಮ್ಮಗ–ಜನಮೇಜಯ ಈ ನಾಡಿನಲ್ಲಿ ಸಾಮ್ರಾಜ್ಯ ನಡೆಸಿದ್ದಲ್ಲದೆ,



ಹಾಸನವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ್ದರಿಂದ ಈ ನಗರಕ್ಕೆ ಸಿಂಹಾಸನಪುರಿ ಎಂದು ಹೆಸರಾಯಿತಂತೆ. ನಂತರ ಇದನ್ನು ಹಾಸನ ಎಂದು ವಾಡಿಕೆಯಿಂದ ಕರೆಯುತ್ತಾರೆ ಎಂದು ನಂಬಲಾಗಿದೆ. 'ಕಿರಾತರ್ಜುನೀಯ'ದ ಕಥೆಯಲ್ಲಿ ಬರುವ ಶಿವನ ಹಾಗೂ ಅರ್ಜುನನ ಹೋರಾಟದ ಪ್ರಸಂಗ ನಡೆದ ಸ್ಥಳವೇ ಈ ಹಾಸನ ಎಂದು ನಂಬಲಾಗಿದೆ. ಹೀಗೆ ಈ ಜಿಲ್ಲೆ ಅತ್ಯಂತ ಪ್ರಾಚೀನವಾದ ಇತಿಹಾಸ ಸಂಸ್ಕೃತಿಯನ್ನು ಹೊಂದಿದ್ದು, ಭಾರತದ ಇತಿಹಾಸದಲ್ಲಿ ಕಲೆ, ಸಂಸ್ಕೃತಿ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಕ್ರಾಂತಿಕಾರಕ ಸಾಧನೆ ಮಾಡಿದ ಹೊಯ್ಸಳರ ರಾಜಧಾನಿ ದೊರಸಮುದ್ರ ಈ ಜಿಲ್ಲೆಯದು, ಹೀಗೆ ಹಾಸನ ಜಿಲ್ಲೆಯು ಕಲೆ, ವಾಸ್ತುಶಿಲ್ಪ, ರಾಜಕೀಯ, ಸಾಹಿತ್ಯ, ಹೋರಾಟಗಳ ಮೂಲ ಕೇಂದ್ರವಾಗಿ ಬೆಳಗುತ್ತಿದೆ ಎಂದರೆ ತಪ್ಪಾಗಲಾರದು. ಆಧುನಿಕ ಕರ್ನಾಟಕದ ಸಾಹಿತ್ಯ, ಸಂಸ್ಕೃತಿ, ರಾಜಕೀಯ ಹೋರಾಟಗಳಿಗೆ ಹಾಸನ ಜಿಲ್ಲೆಯ ಕೊಡುಗೆ ಅನನ್ಯ ಹಾಗೂ ಅಪಾರ. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎಸ್. ಎಲ್. ಭೈರಪ್ಪ, ಹಾಸನ ರಾಜಾರಾಮ್, ಅನಕೃ, ಹೆಚ್.ಬಿ. ಗುಂಡಪ್ಪಗೌಡ, ಎ. ಜಿ. ರಾಮಚಂದ್ರರಾವ್‌ರಂತಹ ದೊಡ್ಡ ಮಟ್ಟದ ಸಾಹಿತಿಗಳನ್ನು ನೀಡಿದ ಜೊತೆಗೆ ಬಿ. ಎನ್. ಬೋರಣ್ಣಗೌಡರಂತಹ ಸ್ವಾತಂತ್ರ್ಯ ಹೋರಾಟಗಾರರನ್ನು ನೀಡಿದೆ. ಅಷ್ಟೇಕೆ ವಿಶ್ವದ ದೊಡ್ಡ ಪ್ರಜಾಪ್ರಭುತ್ವ ಎನಿಸಿರುವ ಭಾರತ ದೇಶಕ್ಕೆ ಪ್ರಧಾನ ಮಂತ್ರಿಯನ್ನು ನೀಡಿದ ಕೀರ್ತಿ ಹಾಸನ ಜಿಲ್ಲೆಗೆ ಸೇರುತ್ತದೆ. ಭಾರತದ ಪ್ರಧಾನಿ ಹುದ್ದೆ ಎಂದರೆ ಕೇವಲ ಉತ್ತರಭಾರತೀಯರಿಗಷ್ಟೇ ಸೀಮಿತ ಎಂದು ಭಾವಿಸಿದ್ದ ಜನರ ಭಾವನೆಗಳನ್ನು ಬದಲಾಯಿಸಿ ಹಳ್ಳಿಯ ಸಾಮಾನ್ಯ ರೈತನ ಮಗನೊಬ್ಬ ಯಶಸ್ವಿಯಾಗಿ ದೆಹಲಿ ಗದ್ದುಗೆಯನ್ನು ಆಳಿ ಯಾವ ಕಪ್ಪುಚುಕ್ಕೆ ಇಲ್ಲದೆ ಹೊರಬಂದ ಮಣ್ಣಿನ ಮಗ ಶ್ರೀ ಹೆಚ್. ಡಿ. ದೇವೇಗೌಡ ಈ ಹಾಸನ ಜಿಲ್ಲೆಯವರು. ಹಾಸನ ಜಿಲ್ಲೆಯಲ್ಲಿ ಅನೇಕ ನೇತಾರರು ಜನಿಸಿರುವ ಜೊತೆಗೆ, ಖ್ಯಾತ ಸ್ವಾತಂತ್ರ್ಯ ಹೋರಾಟಗಾರರು, ಏಕೀಕರಣ ಚಳುವಳಿಯ ರೂವಾರಿಗಳು ಜನಿಸಿ ಈ ನಾಡಿಗೆ ಕೀರ್ತಿ ತಂದು ರಾಜ್ಯ ಅಭಿವೃದ್ಧಿಗೆ ಅಹರ್ನಿಶಿ ಶ್ರಮಿಸಿದ್ದಾರೆ. ಅಂತಹ ಚಳುವಳಿಯ ಹೋರಾಟಗಾರರು, ಪ್ರಾತಃ ಸ್ಮರಣೀಯರು, ಇಂತಹ ಮಹನೀಯರಲ್ಲಿ ನಿಸ್ವಾರ್ಥ ಸೇವಾ ಮನೋಭಾವದ ವ್ಯಕ್ತಿಗಳು ಇದ್ದು ಸ್ವತಂತ್ರ ಹೋರಾಟಕ್ಕೆ ಸ್ಮರಣಿಯ ಕಾಣಿಕೆ ನೀಡಿದ್ದಾರೆ.

ಅರಸಿಕೆರೆ ಹಾಸನ ಜಿಲ್ಲೆಯ ತಾಲ್ಲೂಕುಗಳಲ್ಲಿ ಒಂದು ಈ ಅರಸಿಕೆರೆಯು

ಪ್ರಾಚೀನ ಕಾಲದಿಂದಲೂ ವಾಣಿಜ್ಯ ಚಟುವಟಿಕೆಗಳಿಗೆ ರಾಜ್ಯದಲ್ಲಿಯೇ ಪ್ರಸಿದ್ಧಿ ಪಡೆದಿದೆ ಮತ್ತು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ನಡುವೆ ಸಂಪರ್ಕದ ಕೊಂಡಿಯಂತಿದೆ. ಇದನ್ನು ಕಲ್ಪತರು ನಾಡು ಎಂದು ಕರೆಯುತ್ತಾರೆ. ಇದು ಇತಿಹಾಸ ಪ್ರಸಿದ್ಧ ಪ್ರದೇಶವಾಗಿದ್ದು, ಪುರಾತನ ಕಾಲದಲ್ಲಿ ವಿವಿಧ ಹೆಸರಿನಲ್ಲಿ ಕರೆಯಲಾಗುತ್ತಿತು. ಪ್ರಾಚೀನ ಕಾಲದಲ್ಲಿ ಇದನ್ನು 'ಬಲ್ಲಾಳಪುರ' ಎಂದು ಕರೆಯುತ್ತಿದ್ದರು. ವಿಜಯನಗರದ ಕಾಲದಲ್ಲಿ ಮಾಂಡಲೀಕ ಚನ್ನಪಟ್ಟಣದ ಜಗದೇವರಾಯ ಎಂಬುವರು ಆಳುತ್ತಿದ್ದರು. ನಂತರ ಇಕ್ಕೇರಿ ಶಿವಪ್ಪನಾಯಕನ ಅಧೀನಕ್ಕೆ ಸೇರಿದ್ದು ೧೬೯೦ ರಲ್ಲಿ ಮೈಸೂರು ಒಡೆಯರ ಅಧೀನಕ್ಕೆ ಬಂದಿತ್ತು. ಮರಾಠರ ದಾಳಿಗೆ ಸಿಲುಕಿ ನಲುಗಿತು. ಈ ಪ್ರದೇಶಕ್ಕೆ ಅರಸೀಕೆರೆ ಎಂದು ಹೆಸರು ಬರಲು ಕಾರಣವೆಂದರೆ ಹೊಯ್ಸಳರ ರಾಣಿ ಒಂದು ಕೆರೆಯನ್ನು ಇಲ್ಲಿ ಕಟ್ಟಿಸಿದ್ದರಿಂದ ಈ ಪ್ರದೇಶಕ್ಕೆ "ಅರಸಿಯಕೆರೆ" ಎಂದು ಹೆಸರು ಬಂದಿತು. ಈ ಪ್ರದೇಶವು ಹಲವು ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯಾಗಿದೆ. ಹಲವು ಹೋರಾಟಗಳಿಗೆ ನೆರವು ನೀಡಿದೆ. ಈ ಪ್ರದೇಶದ ಜನತೆ ಸಂಘಟನೆ ಹೋರಾಟಕ್ಕೆ ಸದಾ ಮುಂದೆ ಬರುವಂತರಾಗಿದ್ದಾರೆ. ಈ ಅರಸೀಕೆರೆ ಪ್ರದೇಶವು ಆಧುನಿಕ ಕಾಲದಲ್ಲಿ ಸ್ವಾತಂತ್ರ ಹೋರಾಟ, ಅರಮನೆ ಸತ್ಯಾಗ್ರಹ, ಕರ್ನಾಟಕ ಏಕೀಕರಣ ಹೋರಾಟಗಳಿಗೆ ಮಹತ್ವ ಪೂರ್ಣ ಭೂಮಿಕೆ ಒದಗಿಸಿ ತನ್ನ ಅವಿಸ್ಮರಣೀಯ ಕಾಣಿಕೆ ನೀಡಿದೆ. ಅವುಗಳನ್ನು ಈ ಕೆಳಕಂಡಂತೆ ತಿಳಿದು ಕೊಳ್ಳಬಹುದು.ಈ ಪ್ರದೇಶವು ಹಲವು ಹೋರಾಟಗಾರರಿಗೆ, ಚಳುವಳಿಗಾರರಿಗೆ, ಸಾಹಿತಿಗಳಿಗೆ, ಕಲಾವಿದರಿಗೆ ಜನ್ಮ ನೀಡಿದೆ. ಅರಸಿಕೆರೆ ತಾಲ್ಲೂಕು ಜಾವಗಲ್, ಗಂಡಸಿ, ಬಾಣವರ, ಕಣಕಟ್ಟೆ, ಹಾರನಹಳ್ಳಿ ಇತರ ಹೋಬಳಿಗಳನ್ನು ಹಾಗೂ ಹಲವು ಹಳ್ಳಿಗಳನ್ನು ಒಳಗೊಂಡಿದೆ. ಅರಸೀಕೆರೆಗೆ ಸ್ವತಂತ್ರ ಹೋರಾಟದ ಸಮಯದಲ್ಲಿ ಮಹಾತ್ಮ ಗಾಂಧೀಜಿಯವರು ಹರಿಜನ ಪ್ರವಾಸ ಸೇರಿದಂತೆ ಮೂರು ಬಾರಿ ಬೇಟಿ ನೀಡಿ ಇವರ ಹೋರಾಟಕ್ಕೆ ಸ್ಫೂರ್ತಿಯಾಗಿದ್ದಾರೆ. ಅರಸಿಕೆರೆ ಜನತೆ ಸ್ವತಂತ್ರ ಹೋರಾಟಕ್ಕೆ ಅವಿಸ್ಮರಣೀಯ ಕೊಡುಗೆ ನೀಡಿ ಅದರ ಮುಂದುವರೆದ ಭಾಗದಂತಿರುವ ಅರಮನೆ ಸತ್ಯಾಗ್ರಹ ಮತ್ತು ಕರ್ನಾಟಕ ಏಕೀಕರಣ ಚಳವಳಿಗೆ ಅವಿಸ್ಮರಣೆಗೆ ಕೊಡುಗೆ ನೀಡಿದ್ದಾರೆ.

ಅರಸೀಕೆರೆಯಲ್ಲಿ ಸ್ವಾತಂತ್ರ ಚಳವಳಿಯಲ್ಲಿ ತೊಡಗಲು ಅನುವಾಗುವಂತಹ ಪರಿಸರ ಆವರಿಸಿತ್ತು. ಅರಸೀಕೆರೆಯ ಸುತ್ತಮುತ್ತಲ ಗ್ರಾಮಗಳಲ್ಲಿ ಹಾಗೂ ಶಾಲೆಯಲ್ಲಿ ಅಷ್ಟೊತ್ತಿಗಾಗಲೆ ಸ್ವಾತಂತ್ರ್ಯ ಹೋರಾಟದ ಕಿಡಿಗಳು ಸುಡುತ್ತಿದ್ದವು



ಹೋರಾಟದ ವಿಚಾರಗಳು ಮೊಳಗಿದ್ದವು.ಗಾಂಧಿತತ್ವ, ರಾಷ್ಟ್ರಭಕ್ತಿ ಚಳವಳಿ ಎಂಬ ವಿಚಾರಗಳು ಲೀಲಾಜಾಲವಾಗಿ ಸುತ್ತಲೂ ಗ್ರಾಮಸ್ಥರಲ್ಲಿ ಆವರಿಸಿದ್ದವು. ಆ ಸಮಯದಲ್ಲಿ ಸುತ್ತಮುತ್ತಲ ಗ್ರಾಮಗಳಲ್ಲಿ ತುಂಬಾ ಪ್ರಭಾವಶಾಲಿಗಳಾಗಿದ್ದ ಅರಸೀಕೆರೆಯ ಡಿ. ವಿ. ರಾಮಸ್ವಾಮಿ ಎಂಬ ನಾಯಕರು ದೇಶದ ಆಗು–ಹೋಗುಗಳಿಗೆ ಸಕ್ರಿಯವಾಗಿ ಭಾಗವಹಿಸುತ್ತಾ ದೊಡ್ಡ ನಾಯಕರೆನಿಸಿಕೊಂಡು ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿ ಏಳನೇ ಸರ್ವಾಧಿಕಾರಿಯಾಗಿ ನೇಮಕ ಗೊಂಡಿದ್ದರು. ಈ ಪ್ರದೇಶದಲ್ಲಿ ನಡೆಯುತ್ತಿದ್ದ ಚಳವಳಿಗಳು, ಹೋರಾಟ, ಗಾಂಧಿ ಪ್ರಭಾವವಿದ್ದು ಮಹಾಲಿಂಗರಂಗನ ಕಾಲಜ್ಞಾನದ ಪದ 'ಪರಂಗಿಯವರು ಚಾಪೆ ಸುತ್ತಿಕೊಂಡು ಹೋಗುವರಣ್ಣಾ' ಎಂಬ ಸಾಲುಗಳು ಈ ಪ್ರದೇಶದಲ್ಲಿ ತುಂಬ ಪ್ರಸಿದ್ಧಿಯಾಗಿದ್ದು ಇಲ್ಲಿಯ ಜನರಿಗೆ ಪರಿಣಾಮ ಬೀರಿ ಅವರನ್ನೂ ರಾಷ್ಟ್ರೀಯ ಚಳವಳಿಯತ್ತ ಕೊಂಡೊಯ್ದಿತ್ತು. ಅರಸೀಕೆರೆಯ ಸುತ್ತಮುತ್ತಲ ಗ್ರಾಮಗಳಲ್ಲಿ ಜರುಗುತ್ತಿದ್ದ ಹಬ್ಬ ಮತ್ತು ಜಾತ್ರೆಗಳಲ್ಲಿ ನಡೆಯುತ್ತಿದ್ದ ಆಚರಣೆಯಂತೆ ಬಟ್ಟೆಗೆ ತುಪ್ಪ ಸವರಿ ಬೆಂಕಿ ಹಚ್ಚುವ ಪದ್ಧತಿಯಂತೆ ಹೀಗೆ ಇಂಗ್ಲಿಷರ ಧ್ವಜವನ್ನು ಸುಡಬೇಕು ಎಂದು ವಿದ್ಯಾರ್ಥಿ ಹಾಗೂ ಯುವಕರು ಚರ್ಚಿಸುತಿದ್ದರು.ಇದೇ ಸಮಯದಲ್ಲಿ ಟಿ. ಸಿದ್ದಲಿಂಗಯ್ಯನವರು ಅಮೇರಿಕಾಗೆ ಹೋಗಿದ್ದಾಗ ಖ್ಯಾತ ತತ್ವಶಾಸ್ತ್ರಜ್ಞ, ಇತಿಹಾಸಕಾರ, ಪತ್ರಕರ್ತ ವಿಲ್‌ಡ್ಯುರಾಂಟ್ ೧೯೧೯ ರಲ್ಲಿ ಭಾರತಕ್ಕೆ ಭೇಟಿ ನೀಡಿ ಅವರ ಅನುಭವಗಳನ್ನು ಕುರಿತು ಭಾರತದ ರಾಷ್ಟ್ರೀಯ ಆಂದೋಲನದ ಬಗ್ಗೆ ಒಂದು ಪುಸ್ತಕ ಬರೆದಿದ್ದು, ಈ ಪುಸ್ತಕ ಹೆಚ್ಚು ಪ್ರಭಾವಶಾಲಿ ಆಗಿತ್ತು. ಆದ್ದರಿಂದ ಈ ಪುಸ್ತಕವನ್ನು ಸರ್ಕಾರ ಮುಟ್ಟು ಗೋಲು ಹಾಕಿ ಕೊಂಡಿತ್ತು. ಆದರೆ ಸಿದ್ದಲಿಂಗಯ್ಯ ರಹಸ್ಯವಾಗಿ ಈ ಪುಸ್ತಕವನ್ನು ತಂದಿದ್ದರು.ಈ ಪುಸ್ತಕವನ್ನು ಡಿ. ವಿ. ರಾಮಸ್ವಾಮಿಯವರು ಅರಸೀಕೆರೆಯ ವಿದ್ಯಾರ್ಥಿಗಳಿಗೆ ನೀಡಿದ್ದರು. ಈ ಪುಸ್ತಕವನ್ನು ಓದಿದ ಸ್ವಾತಂತ್ರ ಹೋರಾಟಗಾರರಾಗಿದ್ದ ಹಾರನಹಳ್ಳಿ ರಾಮಸ್ವಾಮಿ ಸೇರಿದಂತೆ ಇತರ ವಿದ್ಯಾರ್ಥಿಗಳು ಪ್ರಭಾವಿತರಾದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಸಿದ್ಧರಾದರು, ಅಲ್ಲದೆ ಇಂತಹ ಚಟುವಟಿಕೆಗಳಲ್ಲಿ ಭಾಗವಹಿಸಲು ಸಹಪಾಠಿಗಳನ್ನು ಪ್ರೇರೇಪಿಸುತ್ತಿದ್ದರು.

ಬ್ರಿಟೀಷರ ವಿರುದ್ಧ ಕರ್ನಾಟಕ ಸ್ವಾತಂತ್ರ್ಯ ಚಳುವಳಿ ಭಾರತದ ಸ್ವಾತಂತ್ರ್ಯ ಚಳವಳಿಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯ ಆರಂಭದಿಂದ ೧೮೫೭ರ ವರೆಗೆ ರಾಜಮಹಾರಾಜರು ನಡೆಸಿದ ಸಶಸ್ತ್ರ ಬಂಡಾಯಗಳು ವಿಫಲವಾದವು. ಇದರಿಂದ ಎಚ್ಚರಿಕೆಯ ಪಾಠ ಕಲಿತ

ಭಾರತೀಯರು ತಾಯ್ನಾಡಿನ ಬಂಧ ಮುಕ್ತಿಗಾಗಿ ಅಹಿಂಸಾತ್ಮಕ ಸ್ವಾತಂತ್ರ್ಯ ಚಳವಳಿಯನ್ನು ಆರಂಭಿಸಿದರು. ಈ ದೆಸೆಯಲ್ಲಿ ರಾಷ್ಟ್ರೀಯತೆಯನ್ನು ಮೈಗೂಡಿಸಿಕೊಂಡ ಕನ್ನಡಿಗರು ಬ್ರಿಟಿಷರ ವಿರುದ್ಧ ಅಹಿಂಸಾತ್ಮಕ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ೧೮೮೫ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಯೊಂದಿಗೆ ಆರಂಭವಾದ ಈ ಚಳವಳಿ ೧೯೪೭ರ ವರೆಗೂ ಮುಂದುವರಿಯಿತು. ಕ್ರಿ.ಶ.೧೯ನೇ ಶತಮಾನದ ಕೊನೆಯಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಮತ್ತು ಇಂಗ್ಲೀಷ್ ಶಿಕ್ಷಣದ ಪ್ರಭಾವದಿಂದಾಗಿ ಕರ್ನಾಟಕದಲ್ಲಿ ರಾಷ್ಟ್ರೀಯತೆಯ ಜಾಗೃತಿ ಉದಯವಾಯಿತು. ಕನ್ನಡಿಗರಲ್ಲಿ ರಾಷ್ಟ್ರೀಯತೆಯ ಜೊತೆಗೆ ಕರ್ನಾಟಕದ ಬಗೆಗಿನ ಪ್ರಾಂತೀಯ ಭಾವನೆಯು ಹುಲುಸಾಗಿ ಬೆಳೆಯಿತು. ಇದರ ಫಲವೇ ಕರ್ನಾಟಕದ ಸ್ವಾತಂತ್ರ್ಯ ಚಳವಳಿ.

೧೮೮೫ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಯೊಂದಿಗೆ ಬ್ರಿಟಿಷರ ವಿರುದ್ಧ ಅಹಿಂಸಾತ್ಮಕ ಸ್ವಾತಂತ್ರ್ಯ ಚಳವಳಿ ಆರಂಭವಾಯಿತು. ಇದರ ಸ್ಥಾಪಕರು ಭಾರತದ ನಿವೃತ್ತ ಐ.ಸಿ.ಎಸ್ ಅಧಿಕಾರಿಯಾಗಿದ್ದ ಎ.ಓ.ಹ್ಯೂಂ. ೧೮೮೫ರ ಡಿಸೆಂಬರ್ ೨೮ ರಂದು ಬೊಂಬಾಯಿ ನಗರದಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಥಮ ಅಧಿವೇಶನ ಡಬ್ಲ್ಯೂ.ಸಿ ಬ್ಯಾನರ್ಜಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಅದರ ಅಧಿವೇಶನದಲ್ಲಿ ಬಳ್ಳಾರಿಯ ಕೋಲಾಚಲಂ ವೆಂಕಟರಾವ್ ಮತ್ತು ಬೆಳಗಾವಿಯ ಭಾವೂ ಸಾಹೇಬಭಾಟೆ ಎಂಬುವರು ಭಾಗವಹಿಸಿದ್ದರು. ಬೆಳಗಾವಿ ಮತ್ತು ಧಾರವಾಡ ಸೇರಿದಂತೆ ಮೈಸೂರು ಪ್ರಾಂತ್ಯಗಳಿಗೆ ಭೇಟಿ ನೀಡಿ ಕಾಂಗ್ರೆಸ್‌ನ ಧ್ಯೆಯೋದ್ದೇಶಗಳನ್ನು ಪ್ರಚಾರ ಮಾಡಿದರು. ಹೀಗೆ ರಾಷ್ಟ್ರೀಯ ಚಳವಳಿಯಲ್ಲಿ ಕರ್ನಾಟಕದ ರಾಷ್ಟ್ರೀಯವಾದಿಗಳು ಪ್ರಮುಖ ಪಾತ್ರವಹಿಸಿದ್ದರು. ಕರ್ನಾಟಕದಲ್ಲಿ ಜನಜಾಗೃತಿ ಮೂಡಿಸುವ ಉದ್ದೇಶದಿಂದ ಆಲೂರು ವೆಂಕಟರಾಯರು, ಕಡಪ ರಾಮಚಂದ್ರರಾವ್ ಮತ್ತು ಇತರರು ೧೯೧೬ ರಲ್ಲಿ ಧಾರವಾಡದಲ್ಲಿ 'ಕರ್ನಾಟಕ ಸಭಾ' ಎಂಬ ಸಂಘವನ್ನು ಸ್ಥಾಪಿಸಿದರು. ೧೯೧೭ ರಲ್ಲಿ ಮದ್ರಾಸ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಕರ್ನಾಟಕಕ್ಕೆ ಪ್ರತ್ಯೇಕ 'ಕಾಂಗ್ರೇಸ್ ಶಾಖೆ'ಯನ್ನು ರಚಿಸುವಂತೆ ಮನವಿ ಸಲ್ಲಿಸಲಾಯಿತು. ಕರ್ನಾಟಕದಲ್ಲಿ ಕನ್ನಡ ವೃತ್ತ ಪತ್ರಿಕೆಗಳು ಸ್ವಾತಂತ್ರ್ಯ ಘೋಷವನ್ನು ಎಲ್ಲಾ ಕಡೆಯೂ ಮೊಳಗಿಸಿದವು. ಬಳ್ಳಾರಿಯ ವಿಜಯಧ್ವಜ, ದಾವಣಗೆರೆಯ ಧನುರ್ಧಾರಿ, ಮೈಸೂರು ಸಂಸ್ಥಾನದ ಕರ್ನಾಟಕ ಪ್ರಕಾಶಿಕಾ, ಧಾರವಾಡದ ಕರ್ನಾಟಕ ವೃತ್ತ, ಬಿಜಾಪುರದ ಕರ್ನಾಟಕ ವೈಭವ, ಮಂಗಳೂರಿನ



ಸ್ವದೇಶಾಭಿಮಾನ, ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮೊದಲಾದ ಪತ್ರಿಕೆಗಳು ರಾಷ್ಟ್ರೀಯ ಭಾವನೆಯನ್ನು ಕೆರಳಿಸಿದವು. ಈ ದೆಸೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶ ಮತ್ತು ಮೈಸೂರು ಸಂಸ್ಥಾನದಲ್ಲೂ ರಾಷ್ಟ್ರೀಯ ಚಳವಳಿಯ ಕಾವು ಏರತೊಡಗಿತು. ೧೯೨೧ರಲ್ಲಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಅಸ್ತಿತ್ವಕ್ಕೆ ಬಂದಿತು. 'ಕರ್ನಾಟಕ ಕೇಸರಿ' ಎಂಬ ಬಿರುದು ಪಡೆದಿದ್ದ ಗಂಗಾಧರರಾವ್‌ದೇಶಪಾಂಡೆ ಕೆ.ಪಿ.ಸಿ.ಸಿ.ಯ ಪ್ರಥಮ ಅಧ್ಯಕ್ಷರಾದರು. ಗದಗದಲ್ಲಿ ಅದು ಕೇಂದ್ರ ಕಚೇರಿ ಹೊಂದಿತ್ತು. ಇದೇ ರೀತಿ ಮೈಸೂರು ಸಂಸ್ಥಾನದಲ್ಲೂ ಕಾಂಗ್ರೆಸ್ ಸಮಿತಿಗಳು ಸ್ಥಾಪನೆಯಾದವು. ಮೈಸೂರು ಸಂಸ್ಥಾನದಲ್ಲಿ ಜಸ್ಟೀಸ್ ಸೆಟ್ಲೂರ್ ರವರ ಅಧ್ಯಕ್ಷತೆಯಲ್ಲಿ 'ಮೈಸೂರು ಕಾಂಗ್ರೆಸ್ ಸಮಿತಿ' ಅಸ್ತಿತ್ವಕ್ಕೆ ಬಂದಿತು. ಇದಲ್ಲದೆ ೧೯೨೧–೨೨ರಲ್ಲಿ ತುಮಕೂರು, ಬೆಂಗಳೂರು, ಕಡೂರು, ಮೈಸೂರು ಮುಂತಾದ ಕಡೆಗಳಲ್ಲಿ ಸ್ಥಳೀಯ ಕಾಂಗ್ರೆಸ್ ಸಮಿತಿಗಳು ಸ್ಥಾಪನೆಯಾದವು. ಇದರಿಂದಾಗಿ ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳವಳಿ ಪ್ರಭಾವಶಾಲಿಯಾಗಿ ಬೆಳೆಯಿತು. ಕರ್ನಾಟಕದಲ್ಲಿ ಖಾದಿ ಪ್ರಚಾರ ಹಾಗೂ ಸ್ವದೇಶಿ ಭಾವನೆ ಬೆಳೆಸುವುದು ಕಾಂಗ್ರೆಸ್ ಪಕ್ಷದ ಉದ್ದೇಶವಾಗಿತ್ತು. ಹೀಗೆ ಗಾಂಧಿ ಪೂರ್ವ ಯುಗದಲ್ಲಿ ಕರ್ನಾಟಕದ ಸ್ವಾತಂತ್ರ್ಯ ಚಳವಳಿಗೆ ವಿಶಾಲವಾದ ಅಡಿಪಾಯ ಹಾಕಲಾಯಿತು. ಮುಂದೆ ಗಾಂಧಿಯುಗದಲ್ಲಿ ಅದು ಹೆಮ್ಮರವಾಗಿ ಬೆಳೆಯಿತು. ಕನ್ನಡಿಗರಲ್ಲಿ ರಾಷ್ಟ್ರೀಯ ಭಾವನೆ ಜಾಗೃತ ಗೊಂಡಿತು.

೧೯೨೪ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಅಧಿಕ ಸಂಖ್ಯೆಯ ಕನ್ನಡಿಗರು ಹುರುಪು ಮತ್ತು ಹುಮ್ಮಸ್ಸಿನಿಂದ ಭಾಗವಹಿಸಿದ್ದರು.

ಬೆಳಗಾವಿಯಲ್ಲಿ ಗಾಂಧೀಜಿ ಮತ್ತು ರಾಷ್ಟ್ರನಾಯಕರು ಮಾಡಿದ ಭಾಷಣಗಳು ಕನ್ನಡಿಗರ ಮೇಲೆ ಅಗಾಧವಾದ ಪ್ರಭಾವ ಬೀರಿತು. ಅನೇಕ ನಿಷ್ಠಾವಂತ ಕಾರ್ಯಕರ್ತರು ದೇಶದ ಸ್ವಾತಂತ್ರ್ಯ ಚಳವಳಿಗಾಗಿ ತಮ್ಮ ಜೀವನವನ್ನೇ ಮುಡುಪಾಗಿರಿಸಿದರು. ಹಲವರು ಹರಿಜನೋದ್ಧಾರ, ಖಾದಿ ಪ್ರಚಾರ, ಮಹಿಳೆಯರ ಏಳಿಗೆ, ಮುಂತಾದ ರಚನಾತ್ಮಕ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿದರು. ಅವರಲ್ಲಿ ಹರ್ಡೀಕರ್ ಮಂಜಪ್ಪ, ಹನುಮಂತರಾವ್ ಕೌಜಲಗಿ, ಗಂಗಾಧರರಾವ್ ದೇಶಪಾಂಡೆ, ಎನ್.ಎಸ್. ಸುಬ್ಬರಾವ್, ಡಿ.ಕೆ. ಭಾರದ್ವಾಜ್, ಕಮಲಾದೇವಿ ಚಟ್ಟೋಪಾಧ್ಯಾಯ, ಯಶೋದಮ್ಮ ದಾಸಪ್ಪ, ಗೌರಮ್ಮ, ಬಳ್ಳಾರಿ ಸಿದ್ಧಮ್ಮ ಮೊದಲಾದವರು ಪ್ರಮುಖರಾಗಿದ್ದರು. ಹಿಂದೂಸ್ತಾನಿ ಸೇವಾದಳದ

ನಾಯಕರಾದ ಡಾ॥ ಎನ್.ಎಸ್. ಹರ್ಡೀಕರ್ ವಾಲಂಟಿಯರ್ ಎಂಬ ಇಂಗ್ಲಿಷ್ ಮಾಸಪತ್ರಿಕೆಯನ್ನು ಹಾಗೂ ಸ್ವಯಂ ಸೇವಕ ಎಂಬ ಹಿಂದಿ ಪತ್ರಿಕೆಯನ್ನು ಆರಂಭಿಸಿದರು. ಹೀಗೆ ಬೆಳಗಾಂ ಕಾಂಗ್ರೆಸ್ ಅಧಿವೇಶನದಿಂದ ಕರ್ನಾಟಕದ ಸ್ವಾತಂತ್ರ್ಯ ಚಳವಳಿಗೆ ಹೊಸ ತಿರುವು ಲಭಿಸಿತು. ೧೯೩೦ರಲ್ಲಿ ಗಾಂಧೀಜಿ ಆರಂಭಿಸಿದ ಕಾನೂನು ಭಂಗ ಚಳವಳಿಯಿಂದ ಕರ್ನಾಟಕದ ಸ್ವಾತಂತ್ರ್ಯ ಚಳುವಳಿಗೆ ಹೊಸ ತಿರುವು ಬಂದಿತು. ದೇಶೀಯ ಸಂಸ್ಥಾನವಾಗಿದ್ದ ಮೈಸೂರು ರಾಜ್ಯದಲ್ಲಿ ರಾಷ್ಟ್ರೀಯ ಚಳವಳಿ ನಿಧಾನವಾಗಿ ಅಂಕುರಾರ್ಪಣೆಯಾಯಿತು. ೧೯೨೦ರ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಷಾವಾರು ಪ್ರಾಂತ್ಯತ್ವಕ್ಕೆ ಅನುಗುಣವಾಗಿ ಕರ್ನಾಟಕಕ್ಕೆ ಪ್ರತ್ಯೇಕವಾದ ಪ್ರದೇಶ ಕಾಂಗ್ರೆಸ್ ಸಮಿತಿಯನ್ನು ರಚಿಸಲು ನಿರ್ಧರಿಸಲಾಯಿತು. ಅಂತೆಯೇ ೧೯೨೧ರಲ್ಲಿ 'ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿ' ಅಸ್ತಿತ್ವಕ್ಕೆ ಬಂದಿತು. ಇದೇ ರೀತಿ ಬೆಂಗಳೂರು, ತುಮಕೂರು, ಕಡೂರು ಮೊದಲಾದ ಕಡೆಗಳಲ್ಲಿ ಸ್ಥಳೀಯ ಕಾಂಗ್ರೆಸ್ ಸಮಿತಿಗಳು ರಚನೆಯಾದವು. ಪ್ರಾರಂಭದಲ್ಲಿ ಹಾಜಿ ಉಸ್ಮಾನ್ ಸೇಠ್ ಅನಂತರ ನಿವೃತ್ತ ನ್ಯಾಯಾಧೀಶರಾದ ಎಸ್.ಎಸ್ ಸೆಟ್ಲೂರ್‌ರವರು ಬೆಂಗಳೂರಿನಲ್ಲಿ ಸ್ಥಾಪಿತವಾಗಿದ್ದ ಮೈಸೂರು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. ಕಾಂಗ್ರೆಸ್ ಕಾರ್ಯಕರ್ತರು ರಚನಾತ್ಮಕವಾದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಸ್ವದೇಶಿ, ಖಾದಿ ಪ್ರಚಾರ, ಮದ್ಯಪಾನ ವಿರೋಧಿ ಚಳವಳಿ, ಅಸ್ಪೃಶ್ಯತಾ ನಿವಾರಣೆ, ಹಿಂದಿ ಭಾಷೆ ಪ್ರಚಾರ ಮುಂತಾದ ಕಾರ್ಯಕ್ರಮಗಳಲ್ಲಿ ತೊಡಗಿಸಿ ಕೊಂಡಿದ್ದರು. ಮೈಸೂರಿನ ವೃದ್ಧ ಪಿತಾಮಹಾ ವೆಂಕಟಕೃಷ್ಣಯ್ಯ, ತಗಡೂರು ರಾಮಚಂದ್ರರಾವ್, ತುಮಕೂರಿನ ರಂಗಅಯ್ಯಂಗಾರ್ ಇಂತಹ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿದ್ದರು. ಇದಲ್ಲದೆ ಉತ್ತರ ಕರ್ನಾಟಕದ ಪ್ರಮುಖ ಕಾಂಗ್ರೇಸ್ ನಾಯಕರಾದ ಆಲೂರು ವೆಂಕಟರಾವ್, ಗಂಗಾಧರರಾವ್ ದೇಶಪಾಂಡೆ, ಕಡಪ ರಾಮಚಂದ್ರರಾವ್, ಡಾ॥ ಹರ್ಡೀಕರ್ ಮೈಸೂರು ರಾಜ್ಯಕ್ಕೆ ಭೇಟಿ ನೀಡಿ ಕಾಂಗ್ರೆಸ್ಸಿನ ಸಂದೇಶಗಳನ್ನು ಭಿತ್ತಿದರು ಈ ದೆಸೆಯಲ್ಲಿ ಮೈಸೂರಿನ ಜನತೆ ಕಾಂಗ್ರೆಸ್ಸಿಗೆ ಹತ್ತಿರವಾಯಿತು. ಶಿವಪುರ ಧ್ವಜ ಸತ್ಯಾಗ್ರಹವು ಕರ್ನಾಟಕದ ಸ್ವಾತಂತ್ರ್ಯ ಚಳವಳಿಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದು ಈ ಅಧಿವೇಶನ ಮುಖ್ಯ ಗುರಿಯಾಗಿತ್ತು.ಈ ಸತ್ಯಾಗ್ರಹದ ನಂತರವೇ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳುವಳಿ ಉಗ್ರ ರೂಪ ತಾಳಿತು. 'ಕರ್ನಾಟಕದ ಜಲಿಯನ್ ವಾಲಾಬಾಗ್'



ಎಂದು ಹೆಸರಾಗಿರುವ ವಿದುರಾಶ್ವತ್ಥ ದುರಂತ ಘಟನೆ ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಶಿವಪುರ ಧ್ವಜಸತ್ಯಾಗ್ರಹ ಮತ್ತು ವಿದುರಾಶ್ವತ್ಥ ಘಟನೆಗಳಿಂದಾಗಿ ಕರ್ನಾಟಕದ ಸ್ವಾತಂತ್ರ್ಯ ಚಳುವಳಿಗೆ ಹೊಸ ಹುರುಪು ಬಂದಂತಾಯಿತು. ೧೯೩೯ರಲ್ಲಿ ಅರಸೀಕೆರೆಯಲ್ಲಿ ಕಾಂಗ್ರೇಸ್ ಅಧಿವೇಶನ ನಡೆಸಿ 'ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ' ಸ್ಥಾಪಿಸುವಂತೆ ನಿರ್ಣಯ ಅಂಗೀಕರಿಸಲಾಯಿತು. ಅಲ್ಲದೆ ಜುಲೈ ೩೦ನೇ ದಿನವನ್ನು 'ಜವಾಬ್ದಾರಿ ಸರ್ಕಾರದ ದಿನ' ಎಂದು ಆಚರಿಸಲಾಯಿತು. ಮುಂದೆ ಮೈಸೂರು ಸಂಸ್ಥಾನದಾದ್ಯಂತ ಜವಾಬ್ದಾರಿ ಸರ್ಕಾರ ರಚನೆಗಾಗಿ ಸತ್ಯಾಗ್ರಹ ಆರಂಭವಾಯಿತು. ಮೈಸೂರು, ಬೆಂಗಳೂರು, ಕೋಲಾರ, ಚಿತ್ರದುರ್ಗ, ಜಿಲ್ಲೆಗಳಲ್ಲಿ ಪ್ರತಿಭಟನೆಗಳು ಜರುಗಿದವು. ಒಟ್ಟಾರೆ ೧೯೩೮–೩೯ರ ಅವಧಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಸಂಗ್ರಾಮ ತೀವ್ರಗೊಂಡು ಜನಜಾಗೃತಿ ಉಂಟಾಯಿತು.

ಹಾಸನ ಜಿಲ್ಲೆಯ ಅರಸೀಕೆರೆ ಪ್ರಾರಂಭದಿಂದಲೂ ದೇಶಪ್ರೇಮಿಗಳ ತವರೂರು. ಹುಟ್ಟು ಹೋರಾಟಗಾರರನ್ನು, ನಿಷ್ಕಳಂಕ ದೇಶ ಪ್ರೇಮಿಗಳನ್ನು ಕೊಡುಗೆಯಾಗಿ ನೀಡುತ್ತ ಬಂದಿದೆ. ಡಿ.ವಿ. ರಾಮಸ್ವಾಮಿ ಮೈಸೂರು ಕಾಂಗ್ರೆಸಿನ ಸಂಸ್ಥಾಪನದ ಪ್ರಭಾವಿ ನಾಯಕರು. ಮೈಸೂರು ಕಾಂಗ್ರೆಸಿನ ೭ನೇ ಸರ್ವಾಧಿಕಾರಿಯಾಗಿ ಚಳವಳಿಯನ್ನು ಉಜ್ವಲಗೊಳಿಸಿದ ಮಹಾನ್ ದೇಶಪ್ರೇಮಿ ಡಿ.ವಿ.ರಾಮಸ್ವಾಮಿಯವರು ತಮ್ಮ ಮನೆಯ ವಿಶಾಲವಾದ ಜಗುಲಿಯ ಮೇಲೆ ಮಕ್ಕಳನ್ನು ಕೂರಿಸಿಕೊಂಡು ದೇಶದಲ್ಲಿ ನಡೆಯುತ್ತಿದ್ದ ಚಳವಳಿಗಳು, ಗಾಂಧಿ ವಿಚಾರಗಳು, ದೆಹಲಿಯ ಘಟನೆಯ ವಿಚಾರಗಳನ್ನು ಮಕ್ಕಳ ಮೈನವಿರೇಳುವಂತೆ ಕಣ್ಣಿಗೆ ಕಟ್ಟುವಂತೆ ಹೇಳುತ್ತಿದ್ದರು. ಹುಡುಗರು ಮೈಯೆಲ್ಲಾ ಕಿವಿಯಾಗಿ ಕೇಳುತ್ತಿದ್ದರು. ಗಾಂಧಿ ಚಳವಳಿ, ಸತ್ಯಾಗ್ರಹ, ಹರತಾಳ ಎಂಬ ವಿಚಾರಗಳು ಸದಾಕಾಲ ಮಕ್ಕಳ ನಾಲಗೆಯಲ್ಲಿ ನಲಿದಾಡುವಂತೆ ಹಾಗೂ ಕಿವಿಗಳಲ್ಲಿ ಗುನುಗುಡುವಂತೆ ಮಾಡಿದರು. ಅರಸಿಕೆರೆಯ ಹಲವು ಹಳ್ಳಿಗಳಲ್ಲಿ ತಕಲಿ ಇಟ್ಟುಕೊಂಡು ನೂಲುತ್ತಿದ್ದರು. ಅವರು ನೂಲುವಾಗ ದೇಶಪ್ರೇಮದ ಹಾಡುಗಳನ್ನು ಹೇಳಿಕೊಳ್ಳುತ್ತಿದ್ದರು. ಕಲ್ಯಾಡಿ ಗ್ರಾಮದ ಶಾನುಭೋಗ ಸೀತರಾಮಯ್ಯನವರು ದೇಶಪ್ರೇಮದಿಂದ ಮೆರೆದವರು. ಇವರು ದಾಸ್ಯ ರಾಜ್ಯದಲ್ಲಿ ಕೆಲಸ ಮಾಡುವುದಿಲ್ಲವೆಂದು ದೊಡ್ಡ ಧ್ವನಿಯಲ್ಲಿ ಹೇಳಿ ತಾಲ್ಲೂಕು ಧಣಿ ಅಮಲ್ದಾರರ ಮುಂದೆ ಶ್ಯಾನುಭೋಗಿಕೆಯ ದಫ್ತರನ್ನು ಎಸೆದು ಬಂದಿದ್ದರು.

ಇವರಿಗೆ ಹಾಗೂ ಇಲ್ಲಿನ ಅನೇಕ ಹೋರಾಟಗಾರರಿಗೆ ದೇಶಪ್ರೇಮ–ರಾಷ್ಟ್ರಾಭಿಮಾನ ರಕ್ತಗತವಾಗಿತ್ತು.

ಈ ಭಾಗದ ವಿದ್ಯಾರ್ಥಿಗಳಿಗೆ, ಯುವಕರಿಗೆ, ಹೋರಾಟಗಾರರಿಗೆ ಡಿ.ವಿ. ರಾಮಸ್ವಾಮಿಯವರ ಮಾತುಗಳು ದೇಶಪ್ರೇಮದ ಅರಿವನ್ನು ಮೂಡಿಸಿದ್ದವು. ಅವರು ತಂದಿದ್ದ ವಿಲ್‌ಡ್ಯುರಾಂಟ್ ಪುಸ್ತಕವನ್ನು ಇವರಿಗೆ ಡಿ. ವಿ. ರಾಮಸ್ವಾಮಿಗಳು ಓದಲು ನೀಡಿದ್ದರು. ಆ ಪುಸ್ತಕದ ಸಾಲುಗಳು ಸ್ವಾತಂತ್ರ್ಯ ಜ್ಯೋತಿಯ ದೀವಟಿಗೆಯ ಕಿಚ್ಚನ್ನು ಅವರ ಮನಸ್ಸಿನಲ್ಲಿ ಹಚ್ಚಿಸಿತು.ಆ ಪುಸ್ತಕದಲ್ಲಿ ನಮೂದಿಸಿದ, ಸಂಗತಿಗಳು ಎಂತಹವರಿಗಾದರೂ ಮೈನವಿರೇಳುವಂತೆ ಮಾಡುತ್ತಿತ್ತು. ೧೯೨೧ ರಲ್ಲಿ ನಾಗಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹದ ವಿಚಾರವು ಅವುಗಳಲ್ಲಿ ಒಂದು. ಸತ್ಯಾಗ್ರಹಿಗಳು ತ್ರಿವರ್ಣ ಧ್ವಜವನ್ನು ಹಿಡಿದುಕೊಂಡು 'ವಂದೇ ಮಾತರಂ' ಎಂದು ಘೋಷಣೆ ಕೂಗುತ್ತ ಮುಂದೆ ನಡೆಯುತ್ತಿದ್ದರು.ಆಗ ಬ್ರಿಟಿಷ್ ಅಧಿಕಾರಿಗಳು ಧ್ವಜ ಹಿಡಿದವರನ್ನು ಗುಂಡಿಟ್ಟು ಕೊಲ್ಲುತ್ತಿದ್ದರು. ಆದರೆ ನೆಲಕ್ಕೆ ಬೀಳುವ ಮೊದಲೇ ಹಿಂದಿದ್ದವರು ಧ್ವಜವನ್ನೆತ್ತಿ ಹಿಡಿದು ಮತ್ತೇ ವಂದೇ ಮಾತರಂ ಎಂದು ಕೂಗುತ್ತ ಮುನ್ನುಗ್ಗುತ್ತಿದ್ದು, ಧ್ವಜ ಕೆಳಗೆ ಬೀಳಲು ಮಾತ್ರ ಆಸ್ಪದ ಕೊಡುತ್ತಿರಲಿಲ್ಲ. ಹೀಗೆ ಹಲವಾರು ಜನರನ್ನು ಆ ಧ್ವಜ ಸತ್ಯಾಗ್ರಹದ ಕಾಲದಲ್ಲಿ ಕೊಲ್ಲಲಾಗುತ್ತಿತ್ತು. ಡ್ಯುರಾಂಟ್ ತಮ್ಮ ಪುಸ್ತಕದ ಕೊನೆಯಲ್ಲಿ "ಈ ದೇಶವನ್ನು ಗುಲಾಮ ದೇಶವನ್ನಾಗಿ ಇಟ್ಟುಕೊಳ್ಳಲು ಸಾಧ್ಯವೇ ಇಲ್ಲ ಕತ್ತಿಯನ್ನೆತ್ತದೆ ದೇಶಕ್ಕಾಗಿ ಪ್ರಾಣಕೊಡುವ ಜನರಿರುವ ದೇಶವಿದು. ಆದುದರಿಂದ ಈ ದೇಶವನ್ನು ಪರಕೀಯರು ಹೆಚ್ಚು ದಿನ ಆಳಲು ಸಾಧ್ಯವಿಲ್ಲ" ಎಂದು ಬರೆದಿದ್ದ ವಾಕ್ಯಗಳು ಈ ಹೋರಾಟಗಾರರ ಮನಸ್ಸನ್ನು ವೀರ ಅಭಿಮನ್ಯುಗಳನ್ನಾಗಿ ರೂಪಿಸಿತು. ತಿಪಟೂರಿಗೆ ಮಹಾತ್ಮ ಗಾಂಧೀಜಿಯವರ ಆಪ್ತರಾಗಿದ್ದ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ಬಂದು ಒಂದು ದೊಡ್ಡ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ್ದರು. ಈ ಸಭೆಯಲ್ಲಿ ತಿಪಟೂರು, ಕಡೂರು ಮತ್ತು ಅರಸೀಕೆರೆಯ ಜನತೆ ಭಾಗವಹಿಸಿದ್ದರು. ಅವರು ಜನತೆಯನ್ನುದ್ದೇಶಿಸಿ "ಇಡೀ ಭಾರತದ ಜನತೆ ಒಂದು ಸಲ ಉಗುಳಿ ಬಿಟ್ಟರೆ ಬ್ರಿಟಿಷರು ಅದರಲ್ಲಿ ತೇಲಿಹೋಗುತ್ತಾರೆ." ಎಂದು ಹೇಳಿದ ಮಾತುಗಳಿಂದ ಇವರಲ್ಲಿ ಹೋರಾಟದ ಸಿಂಹಶಕ್ತಿಯನ್ನು ಹುಟ್ಟು ಹಾಕಿತು.

ಡಿ.ವಿ.ರಾಮಸ್ವಾಮಿ ಮೈಸೂರು ಸಂಸ್ಥಾನದ ಕಾಂಗ್ರೆಸ್‌ನ ಪ್ರಮುಖ



ನಾಯಕರಾಗಿದ್ದು ಮನೆಯ ಜಗುಲಿಯ ಮೇಲೆ ಕುಳಿತು ಹುಡುಗರನ್ನೆಲ್ಲ ಕೂರಿಸಿಕೊಂಡು ದೇಶದಲ್ಲಿ ನಡೆಯುತ್ತಿದ್ದ ಚಳವಳಿಗಳು, ಗಾಂಧಿ ವಿಚಾರ ಎಲ್ಲವನ್ನು ಹೇಳುತ್ತಿದ್ದರು. ಅವರು ಹೇಳುತ್ತಿದ್ದರೇ ಹುಡುಗರ ಮೈಯೆಲ್ಲಾ ಕಿವಿಯಾಗಿ ಕೇಳುತ್ತಿದ್ದರು. ಮುಂಬಯಿಯಲ್ಲಿ ಹೀಗಾಯ್ತು ದೆಹಲಿಯಲ್ಲಿ ಹೀಗಾಯ್ತು ಎಂದು ಹತ್ತಾರು ಸಂಗತಿಗಳನ್ನು ಹೇಳುತ್ತಿದ್ದರು. ಗಾಂಧಿ ಚಳುವಳಿ, ಸತ್ಯಾಗ್ರಹ ಎಂಬ ಶಬ್ದಗಳು ಹುಡುಗರ ಕಿವಿಯ ಮೇಲೆ ಬೀಳುತ್ತಾ ಆಸಕ್ತಿ ಕೆರಳುವಂತಾಯಿತು.

೧೯೩೮ರ ಏಪ್ರಿಲ್ ೨೫ರಂದು ವಿದುರಾಶ್ವತ್ಥದಲ್ಲಿ ಮೈಸೂರು ಕಾಂಗ್ರೆಸ್ ಅಧಿವೇಶನ ನಡೆಯಿತು ಈ ಸಭೆಯಲ್ಲಿ ಸರ್ಕಾರದ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ೧೦ ಸಾವಿರ ಜನರು ಭಾಗವಹಿಸಿದ್ದರು. ಸಮಾವೇಶದಲ್ಲಿ ಧ್ವಜಾರೋಹಣವನ್ನು ನೆರವೇರಿಸಿ ಬಹಿರಂಗ ಸಭೆ ನಡೆಸಲಾಯಿತು. ಆದರೆ ಪೊಲೀಸರು ಧ್ವಜಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ನಾಯಕರನ್ನು ಬಂಧಿಸಿದರು. ಸಭೆಯಲ್ಲಿ ಭಾಗವಹಿಸಿದ್ದ ಜನರನ್ನು ಚದುರಿಸಲು ಲಾಠಿ ಪ್ರಹಾರ ಮಾಡಿದರು. ಬಂಧಿತ ನಾಯಕರನ್ನು ಕರೆದೊಯ್ಯುವಾಗ ಪೊಲೀಸರಿಗೂ ಮತ್ತು ಜನರಿಗೂ ಘರ್ಷಣೆ ಸಂಭವಿಸಿತು. ಆಗ ಪೊಲೀಸರು ಶಾಂತಿಯುತವಾಗಿ ಸಭೆಯಲ್ಲಿ ಭಾಗವಹಿಸಿದ್ದ ಮುಗ್ಧ ಜನರ ಮೇಲೆ ಗುಂಡು ಹಾರಿಸಿದರು. ಅವರ ಗುಂಡಿಗೆ ೩೨ ಜನ ಬಲಿಯಾದರು. ಅಪಾರ ಜನರು ಗಾಯಗೊಂಡರು ಇದೇ 'ವಿದುರಾಶ್ವತ್ಥ ದುರಂತ ಘಟನೆ' ಇದು ಕರ್ನಾಟಕದ 'ಜಲಿಯನ್‌ವಾಲಾ ಬಾಗ್ ದುರಂತ' ಎಂದೇ ಹೆಸರಾಗಿದೆ. ಈ ದುರಂತ ಘಟನೆಯ ಸುದ್ದಿ ತಿಳಿದು ಇಡೀ ಭಾರತವೇ ತಲ್ಲಣಗೊಂಡಿತು. ಗಾಂಧೀಜಿ ಈ ದುರಂತವನ್ನು ಉಗ್ರವಾಗಿ ಖಂಡಿಸಿದರು ಅದರ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವಂತೆ ಆಗ್ರಹಿಸಿದರು. ಘಟನೆಯ ಬಗ್ಗೆ ವರದಿ ಪಡೆಯಲು ಅವರು ಮಹದೇವ ದೇಸಾಯಿಯವರನ್ನು ಕಳುಹಿಸಿದರು. ಆನಂತರ ಸರ್ಕಾರ ಬಂಧಿತರನ್ನು ಬಿಡುಗಡೆ ಮಾಡಿತು. ಹೀಗೆ ವಿದುರಾಶ್ವತ್ಥ ದುರಂತವು ಕರ್ನಾಟಕದ ಸ್ವಾತಂತ್ರ್ಯ ಚಳವಳಿಯ ಇತಿಹಾಸದಲ್ಲಿ ಒಂದು ಹೆಗ್ಗುರುತು. ಸರ್ಕಾರ ಕೈಗೊಂಡ ದಮನಕಾರಿ ಕ್ರಮಗಳಿಂದಾಗಿ ಮೈಸೂರು ಕಾಂಗ್ರೆಸ್ ಪಕ್ಷ ಮತ್ತು ಸ್ವಾತಂತ್ರ್ಯ ಚಳುವಳಿ ಹುಲುಸಾಗಿ ಬೆಳೆಯಿತು. ಅದು ಮತ್ತಷ್ಟು ಶಕ್ತಿಯುತವಾಯಿತು. ಒಬ್ಬ ವಿದ್ವಾಂಸರು ವಿದುರಾಶ್ವತ್ಥ ಘಟನೆಯಿಂದಾಗಿ ಕಾಂಗ್ರೆಸ್‌ಗೆ ಇನ್ನೊಂದು ಶತಮಾನದಲ್ಲಿ ಬರಬಹುದಾಗಿದ್ದ ಶಕ್ತಿಯು ಅಲ್ಪಕಾಲದಲ್ಲೇ ಬಂದಿತು ಎಂದಿದ್ದಾರೆ.

ಶಿವಪುರ ಧ್ವಜಸತ್ಯಾಗ್ರಹ ಮತ್ತು ವಿದುರಾಶ್ವತ್ಥ ಘಟನೆಗಳಿಂದಾಗಿ ಕರ್ನಾಟಕದ ಸ್ವಾತಂತ್ರ್ಯ ಚಳವಳಿಗೆ ಹೊಸ ಹುರುಪು ಬಂದಂತಾಯಿತು. ೧೯೩೯ರಲ್ಲಿ ಅರಸೀಕೆರೆಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಸಿ 'ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ' ಸ್ಥಾಪಿಸುವಂತೆ ನಿರ್ಣಯ ಅಂಗೀಕರಿಸಲಾಯಿತು. ಅಲ್ಲದೆ ಜುಲೈ ೩೦ನೇ ದಿನವನ್ನು 'ಜವಾಬ್ದಾರಿ ಸರ್ಕಾರದ ದಿನ' ಎಂದು ಆಚರಿಸಲಾಯಿತು. ಮುಂದೆ ಮೈಸೂರು ಸಂಸ್ಥಾನದಾದ್ಯಂತ ಜವಾಬ್ದಾರಿ ಸರ್ಕಾರ ರಚನೆಗಾಗಿ ಸತ್ಯಾಗ್ರಹ ಆರಂಭವಾಯಿತು.ಮೈಸೂರು, ಬೆಂಗಳೂರು, ಕೋಲಾರ, ಚಿತ್ರದುರ್ಗ, ಜಿಲ್ಲೆಗಳಲ್ಲಿ ಪ್ರತಿಭಟನೆಗಳು ಜರುಗಿದವು. ಒಟ್ಟಾರೆ ೧೯೩೮–೩೯ರ ಅವಧಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಸಂಗ್ರಾಮ ತೀವ್ರಗೊಂಡು ಜನಜಾಗೃತಿ ಉಂಟಾಯಿತು. ಈ ಚಟುವಟಿಕೆಗಳಲ್ಲಿ ಅರಸೀಕೆರೆಯನ್ನು ಪ್ರಮುಖ ಕೇಂದ್ರವನ್ನಾಗಿಸಿ ಕೊಂಡು ಚಳವಳಿಯನ್ನು ನಡೆಸಲಾಯಿತು ಎಂಬುದು ಪ್ರಮುಖವಾಗಿ ಗಮನಿಸ ಬೇಕಾದ ವಿಷಯವಾಗಿದೆ. ಅರಸೀಕೆರೆಯ ಸ್ವಾತಂತ್ರ ಹೋರಾಟದಲ್ಲಿ ಹಾರನಹಳ್ಳಿ ರಾಮಸ್ವಾಮಿಯವರದು ದೊಡ್ಡ ಹೆಸರು ಪುಸ್ತಕ ಪ್ರೇಮಿಯಾಗಿದ್ದ ಇವರಿಗೆ ಶ್ರೀನಿವಾಸ, ಬಂಕಿಮ ಚಂದ್ರ ಮತ್ತು ಕನ್ನಡದ ಎಲ್ಲಾ ಹಿರಿಯ ಸಾಹಿತಿಗಳು ಬರೆದ ಪುಸ್ತಕಗಳನ್ನು ಓದುವ ಹವ್ಯಾಸವಿತ್ತು. ಆ ಪುಸ್ತಕಗಳು ಅವರನ್ನು ರಾಷ್ಟ್ರಪ್ರೇಮಿಯನ್ನಾಗಿ ರೂಪಿಸಿದ್ದವು. ಶಾಲಾ ಶಿಕ್ಷಕರು ಒದಗಿಸುತ್ತಿದ್ದ ಪತ್ರಿಕೆಗಳು, ಚಳವಳಿ, ಸತ್ಯಾಗ್ರಹ ಮುಂತಾದ ವಿಚಾರಗಳನ್ನು ಹೆಚ್ಚು ಹೆಚ್ಚಾಗಿ ತಿಳಿಯುವುದು ಮತ್ತು ಸಹಪಾಟಿಗಳನ್ನು ಹೋರಾಟಕ್ಕೆ ಪ್ರೇರೇಪಿಸುವುದು ಇವರಿಗೆ ಪ್ರಿಯವಾಗಿತ್ತು.

ರಾಮಸ್ವಾಮಿಯವರು ಬಾಲಕರಾಗಿದ್ದಾಗಲೇ ಅವರ ಮನಸ್ಸಿನಲ್ಲಿ ದೇಶಪ್ರೇಮ, ಸ್ವಾತಂತ್ರ್ಯ ಪ್ರೇಮವೇ ಅವರಲ್ಲಿ ಮೇಳೈಸಿತ್ತು. ಅವರ ಕುಟುಂಬದವರೂ ಕೂಡಾ ರಾಷ್ಟ್ರೀಯತೆಯ ಹಿನ್ನೆಲೆಯನ್ನು ಹೊಂದಿದ್ದರು. ಮೊದಲು ರಾಮಸ್ವಾಮಿಗಳ ಅಜ್ಜ ರಂಗಪ್ಪನವರಿಗೆ ಗಾಂಧೀಜಿಯವರ ಪ್ರಭಾವ ಅವರ ಮೇಲಾಗಿತ್ತು. ೧೯೨೮–೨೯ರ ವೇಳೆಗೆ ಗಾಂಧೀಜಿಯವರು ಸ್ವಾತಂತ್ರ್ಯ ಪ್ರೇಮಿಗಳ ಮನೆ ಮಾತಾಗಿದ್ದರು.ಅಜ್ಜ ರಂಗಪ್ಪನವರ ಮೊಮ್ಮಗ ರಾಮಸ್ವಾಮಿ ಅವರ ಮುಂದೆ ಆಗಾಗ್ಗೆ ಕವಿ ಮಹಲಿಂಗನ ಕಾಲಜ್ಞಾನದ ಪದಗಳನ್ನು ಹೇಳುತ್ತಿದ್ದರು. ಅದರ ಒಂದು ಪದ ಹೀಗಿದೆ: 'ಪರಂಗಿಯವರು ಚಾಪೆ ಸುತ್ತಿಕೊಂಡು ಹೋಗುವರಣ್ಣಾ ಎಂಬುದು. ಈ ಪದ ಬಹಳ ಪರಿಣಾಮ ಬೀರಿತು ಮೊಮ್ಮಗನ ಮನದ ಮೇಲೆ ತೊಡಗಿಸಿಕೊಳ್ಳುವಂತೆ ಪ್ರೇರೆಪಿಸಿತು.



ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಶಿಸ್ತಿನ ಸಿಪಾಯಿಯಾಗಿದ್ದ ಅವರ ರಾಷ್ಟ್ರಪ್ರೇಮ, ದೇಶಭಕ್ತಿ, ಕ್ರಿಯಾಶೀಲತೆ, ಸಾತ್ವಿಕತೆ, ಸಾಮರಸ್ಯದ ಬದುಕು, ಉನ್ನತ ಮಟ್ಟದ ಚಿಂತನೆ, ಆಧ್ಯಾತ್ಮದ ತಿಳಿವಳಿಕೆ, ಚಾಣಕ್ಯ ನೀತಿ, ಗಟ್ಟಿತನ ಎಲ್ಲವೂ ತರಗತಿಯ ವೇಳೆಗೆ ರೂಪುಗೊಂಡಿತು.

ಹಾಸನ ಮತ್ತು ಅರಸೀಕೆರೆಯ ನಾಯಕರುಗಳು ಒಟ್ಟಿಗೆ ಸೇರಿ ಬ್ರಿಟಿಷ್ ಸರ್ಕಾರಕ್ಕೆ ಸವಾಲೆಸೆದು ಸರ್ಕಾರದ ವಿರುದ್ಧ ಪ್ರತಿಸರ್ಕಾರ ಸ್ಥಾಪಿಸಲು ಮುಂದಾದರು ಅದಕ್ಕಾಗಿ ಅವರು ಈ ಪ್ರದೇಶಗಳಲ್ಲಿ 'ಪ್ರಜಾಸರ್ಕಾರ' ಅಥವಾ ಬ್ರಟಿಷ್ ಸರ್ಕಾರದ ವಿರುದ್ಧ ಪ್ರತಿಸರ್ಕಾರವನ್ನು ಸ್ಥಾಪಿಸಲು ಮುಂದಾದರು. ಅದರಂತೆ ಹಾಸನ ತಾಲ್ಲೂಕು ಸಾಲಗಾಮೆ ಹೋಬಳಿ ಹಾಗೂ ಅರಸೀಕೆರೆ ತಾಲ್ಲೂಕು ಹಾರನಹಳ್ಳಿ ಹೋಬಳಿಯ ವಿಶಾಲ ಅರಣ್ಯ ಪ್ರದೇಶದ ನಲವತ್ತು ಹಳ್ಳಿಗಳು ಇವರ ಕಾರ್ಯಕ್ಷೇತ್ರವಾಯಿತು. ಈ ಹಳ್ಳಿಗಳಲ್ಲಿ ಸ್ವಾತಂತ್ರ್ಯ ಭಾರತವೆಂಬ ಘೋಷಣೆ ಮಾಡಲಾಯಿತು.ಈ ಗ್ರಾಮಗಳಿಂದ ಭೂ ಕಂದಾಯ ಸರ್ಕಾರಕ್ಕೆ ಹೋಗುವಂತಿಲ್ಲ. ಸರ್ಕಾರಿ ಅಧಿಕಾರಿ ನೌಕರರು ಇಲ್ಲಿಗೆ ಬರುವಂತಿರಲಿಲ್ಲ. ಪೊಲೀಸರ ಕೈಗೆ ಸಿಗದೆ ರಾತ್ರಿ ವೇಳೆಯಲ್ಲಿ ಹಳ್ಳಿ ಹಳ್ಳಿಗಳಿಗೆ ಮಿಂಚಿನ ಭೇಟಿ ನೀಡಿ ಹೋರಾಟಕ್ಕೆ ಜನರನ್ನು ರಾಮಸ್ವಾಮಿಗಳು ಹುರಿದುಂಬಿಸುತ್ತಿದ್ದರು. ಸರ್ಕಾರವು ಕಣ್ಣುಮುಚ್ಚಿ ಕುಳಿತಿರಲಿಲ್ಲ. ಮೀಸಲು ಪಡೆ ಪೊಲೀಸರನ್ನು ಹಳ್ಳಿ ಹಳ್ಳಿಗೆ ನುಗ್ಗಿಸಿ ಜನರಿಗೆ ನಾನಾ ರೀತಿಯ ಹಿಂಸೆಯನ್ನು ಕೊಡುತ್ತಿದ್ದರು. ಕೊನೆಗೆ ಗೋಲಿಬಾರ್ ಮಾಡಲು ಹಿಂಜರಿಯಲಿಲ್ಲ. ಆನೇಕ ಜನರ ಪ್ರಾಣವನ್ನು ಬಲಿ ತೆಗೆದು ಕೊಂಡರು. ಹಾಸನ ತಾಲ್ಲೂಕು ಸೊಪ್ಪಿನಹಳ್ಳಿ ಗ್ರಾಮದ ಸುತ್ತಮುತ್ತ ೩೦–೪೦ ಹಳ್ಳಿಗಳಲ್ಲಿ ಪ್ರಜಾರಾಜ್ಯ ಘೋಷಿಸಲಾಯಿತು. ಆ ಪ್ರದೇಶಕ್ಕೆ ಪೊಲೀಸರು ಪ್ರವೇಶಿಸುವಂತೆಯೇ ಇರಲಿಲ್ಲ. ಗಂಗೂರು ಗ್ರಾಮಕ್ಕೆ ಪೊಲೀಸರ ಪ್ರವೇಶವಾಗಿ ಘರ್ಷಣೆಯಲ್ಲಿ ಗೋಲಿಬಾರ್ ನಡೆದು ಇಬ್ಬರನ್ನು ಸಾಯಿಸಲಾಯಿತು.

೧೯೪೨ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಮೈಸೂರು ಸಂಸ್ಥಾನ ಹಿಡಿತ ಸಾಧಿಸಿ ಮೈಸೂರು ಕಾಂಗ್ರೆಸ್ ಇಡೀ ಮೈಸೂರು ಸಂಸ್ಥಾನದಾದ್ಯಂತ ಉಗ್ರ ಸ್ವರೂಪವನ್ನು ಪಡೆದುಕೊಂಡಿತ್ತು. ಮೈಸೂರು ಸಂಸ್ಥಾನದ ಕಾಂಗ್ರೆಸಿನ ನಾಯಕರಾದ ಕೆ. ಟಿ. ಭಾಷ್ಯಂ, ಟಿ. ಸಿದ್ದಲಿಂಗಯ್ಯ, ಹನುಮಂತಯ್ಯ, ತಾಳಿಕೆರೆ ಸುಬ್ರಹ್ಮಣ್ಯ, ಬೋರಣ್ಣಗೌಡ, ಹೆಚ್. ಸಿ. ದಾಸಪ್ಪ ಮುಂತಾದ ನಾಯಕರನ್ನು

ಬಂಧಿಸಿ ಹಾಸನ ಜಿಲ್ಲಾ ಕಾರಾಗೃಹಕ್ಕೆ ಕರೆತಂದು ಬಂಧನದಲ್ಲಿರಿಸಿದ್ದರು.ಇಂತಹ ನಾಯಕರು ಜೈಲಿನಿಂದಲೇ ಹಾಸನ ಜಿಲ್ಲೆಯ ಯುವ ನಾಯಕರಿಗೆ ಮಾರ್ಗದರ್ಶನ ನೀಡುತ್ತಿದ್ದರು. ಆಗ ಚಳವಳಿ ನಡೆಸಲು ಒಂದು ದೊಡ್ಡ ತಂಡವೇ ಇತ್ತು. ಒಂದು ಸಾವಿರ, ಕೆಲವು ಸಲ ಐನೂರು ಕಡಿಮೆ ಅಂದರೆ ೨೦೦ ಜನ ಗುಂಪು ಕಟ್ಟಿ ಕೆಲಸಕ್ಕೆ ಹೋಗುತ್ತಿದ್ದರು. ಸುತ್ತಮುತ್ತಲಿನ ಗ್ರಾಮಗಳಾದ ಗಂಗೂರು, ಅರಸೀಕೆರೆ, ಸಾಣೇನಹಳ್ಳಿ, ಅಡಗೂರು, ಹಳೇಬೀಡು, ಲಿಂಗನಕೊಪ್ಪಲು ಜಾವಗಲ್, ನಿಟ್ಟೂರು, ಹೀಗೆ ದೊಡ್ಡ ಗ್ರಾಮಗಳಲ್ಲಿ ಸಂತೆ ಸುಂಕ ಕೊಡದಂತೆ ಪ್ರಚಾರ ಮಾಡಿ ಈಚಲು ಮರ ಕಡಿಯುವುದು, ಸೇಂದಿ ಅಂಗಡಿ ಲೂಟಿ, ರೈಲು ಹಳಿ ಕೀಳುವುದು, ತಂತಿ ಕತ್ತರಿಸುವುದು. ಸ್ಟೇಷನ್ ಸುಡುವುದು, ಪೊಲೀಸ್ ಸ್ಟೇಷನ್ ಲೂಟಿ ಇತ್ಯಾದಿಗಳಿಂದ ಸರ್ಕಾರಕ್ಕೆ ಲುಕ್ಸಾನು ಮಾಡುವ ಕೆಲಸ ಮಾಡುತ್ತಿದ್ದರು.

ಇದರಲ್ಲಿ ಮಂಜಪ್ಪಗೌಡ್ರು, ಪುಟ್ಟೇಗೌಡ್ರು, ನಂಜುಂಡಯ್ಯ, ಅನಂತಯ್ಯ, ಹೀಗೆ ಆನೇಕ ಜನ ನಾಯಕರಾಗಿದ್ದು, ಹಳೇಬೀಡಿನಿಂದ ಗವಿಯಪ್ಪ ಶೆಟ್ರು, ಮರಿಸಿದ್ದಪ್ಪ, ಸಿದ್ದಪ್ಪ, ಪುಟ್ಟಯ್ಯ, ಮಲ್ಲೇಶ್ವರಪ್ಪ ಮುಂತಾದ ಇನ್ನು ಕೆಲವರು ಸಾಣೇನಹಳ್ಳಿ ಅಖಂಡಶೆಟ್ಟಿ, ಸಿದ್ದಲಿಂಗಯ್ಯ, ರುದ್ರೇಗೌಡ, ಎಸ್. ಗಂಗಾಧರಪ್ಪ, ಲಕ್ಕಜ್ಜೆಗೌಡ, ನಿಂಗೇಗೌಡ, ಸಣ್ಣವೀರೇಗೌಡ, ನಿಂಗೇಗೌಡ, ಚನ್ನಯ್ಯ, ಕೆಂಚಯ್ಯ, ಗಂಗೂರಿನ ಮಲ್ಲೇಶಗೌಡ, ಕರೀಗೌಡ, ತಿಮ್ಮೇಗೌಡ, ಈರೇಗೌಡ, ರಂಗಪ್ಪ, ಹುಲಿಗೌಡ, ಲಿಂಗನಕೊಪ್ಪಲಿನ ಮಲ್ಲೇಗೌಡ, ರಾಮೇಗೌಡ ಅಡುಗೂರಿನ ಮಡಿವಾಳಯ್ಯ, ಕೃಷ್ಣಪ್ಪ, ತಿಪಟೂರಿನ ಟೈಲರ್ ರಂಗಪ್ಪ, ಗಂಗಪ್ಪ, ಮುಂತಾದವರು ಬೇಲೂರು, ಹಳೇಬೀಡು, ಜಾವಗಲ್, ಹಾಸನ, ಅರಸೀಕೆರೆ, ಗಂಡಸಿ, ಹುಲ್ಲುಗುಂಡಿ ಸಂತೆಗಳಲ್ಲಿ ಸುಂಕ ಕೊಡದಂತೆ ಸಂತೆಗಳಲ್ಲಿ ಕರ ನಿರಾಕರಣಾ ಚಳವಳಿಯನ್ನು ಪ್ರಚಾರಪಡಿಸಿದರು. ಬಾಣಾವರ, ಅರಸೀಕೆರೆ, ಕಡೂರು, ತಿಪಟೂರುವರೆಗೆ ರೈಲ್ವೆ ಹಳಿಗಳನ್ನು ಕಿತ್ತು ಹಾಕಲಾಯಿತು. ಜಾವಗಲ್ ಸಂತೆಯಲ್ಲಿ ಪಿಕೇಟಿಂಗ್ ಆದಾಗ ಅರಸೀಕೆರೆಯ ಎರಡು ಲಾರಿ ಚಿಕ್ಕಮಗಳೂರಿನಿಂದ ಎರಡು ಲಾರಿ ಮಿಲಿಟರಿ ತಂದು ಲಾಠಿ ದೊಣ್ಣೆಗಳಿಂದ ಹೊಡೆದು ಜನರನ್ನು ಚದುರಿಸಿದರು. ಚಳವಳಿಗಾರರು ಕಾಡು ಮೇಡುಗಳನ್ನು ಹೊಕ್ಕು ತಪ್ಪಿಸಿಕೊಳ್ಳುತ್ತಿದ್ದರು. ರಾತ್ರಿ ಜಾವಗಲ್‌ನಿಂದ ಎರಡು ಲಾರಿ ಮಿಲಿಟರಿ ಹಳೇಬೀಡು ಪ್ರವಾಸಿ ಮಂದಿರದಲ್ಲಿ ಇಳಿದು ಬೆಳಗ್ಗೆ ನಾಲ್ಕು ಗಂಟೆಗೆ ಸಾಣೇನಹಳ್ಳಿಗೆ ಹೋಗಿ ಮುಖ್ಯಸ್ಥರನ್ನು ಬಂಧಿಸಿ ಅಲ್ಲಿಂದ ಗಂಗೂರು, ಲಿಂಗನಕೊಪ್ಪಲು



ಎಲ್ಲ ಕಡೆ ಹೋಗಿ ಮುಖ್ಯಸ್ಥರನ್ನು ಬಂಧಿಸಿದರು. ಬೆಳಗಿನ ಆರು ಘಂಟೆಗೆ ಮತ್ತೆ ಹಳೇಬೀಡಿಗೆ ಬಂದು ಅಲ್ಲಿ ಕೊಟ್ಟ ಲಾಠಿ ಹೊಡೆತದಿಂದಲೇ ಗಂಗೂರಿನ ಹುಲಿಗೌಡರು ಎರಡೇ ದಿನಗಳಲ್ಲಿ ಸತ್ತರು. ಬಸ್ತಿಹಳ್ಳಿಯ ಪಟೇಲ ನಂಜೇಗೌಡ್ರು ಸಾಣೇನಹಳ್ಳಿಯಿಂದ ತಪ್ಪಿಸಿಕೊಂಡರು, ಪ್ರತಿದಿನ ಪೊಲೀಸರು ಮನೆಗೆ ಬಂದು ಹೆಂಗಸರನ್ನು ಬೆದರಿಸಿ ಪಟೇಲರನ್ನು ಗುಂಡಿಟ್ಟು ಕೊಲ್ಲುವುದಾಗಿ ಹೆದುರಿಸಿ ಹೋಗುತ್ತಿದ್ದರು. ಒಂದೊಂದು ದಿನ ಒಂದೊಂದು ಊರಿನಿಂದ ಮತ್ತೊಂದು ಊರಿನಲ್ಲಿ ತಲೆಮರೆಸಿಕೊಂಡರು. ಹೋದ ಕಡೆಯಲೆಲ್ಲಾ ಗ್ರಾಮಸ್ಥರು ಊಟ ಹಾಕುತ್ತಿದ್ದಾರಲ್ಲದೇ ಖರ್ಚಿಗೂ ಹಣ ಕೊಡುತ್ತಿದ್ದರು. ಕಡೆಗೆ ಪುಟ್ಟೇಗೌಡರ ಸಲಹೆಯಂತೆ ಬೇಲೂರು ಪೊಲೀಸ್ ಸ್ಟೇಷನ್‌ನಲ್ಲಿ ಪಟೇಲ್ ಬಿ. ಟಿ. ನಂಜೇಗೌಡರು ಶರಣಾಗತರಾಗಿದ್ದರು. ನಂತರ ಅವರನ್ನು ಸಕಲೇಶಪುರ ಸ್ಟೇಷನ್‌ಗೆ ಕರೆದೊಯ್ದರು, ಸಿಕ್ಕಪಟ್ಟೆ ಹೊಡೆದು ಇದರಿಂದ ಅವರ ಬಲಗಣ್ಣೇ ಹೋಯಿತು. ಇಂತಹ ಸ್ವಾತಂತ್ರ್ಯ ಹೊರಾಟಗಾರರ ಮೇಲೆ ದಂಡವಿದ್ದು ಅದರ ವಸೂಲಿಗಾಗಿ ಹಂಡೆ, ಕೊಡ, ತಪ್ಪಲಿ, ಊಟದ ತಟ್ಟೆ ಮಾರಾಟ ಮಾಡಿ ಜಮಾ ಮಾಡಿಕೊಳ್ಳುತ್ತಿದ್ದರು.

೧೯೪೨ರ ಆಗಸ್ಟ್ ತಿಂಗಳು ಕ್ವಿಟ್ ಇಂಡಿಯಾ ಚಳವಳಿ ಕಾಲಕ್ಕೆ ಅರಸೀಕೆರೆಯಲ್ಲಿ ಅಪೂರ್ವ ಜನಜಾಗೃತಿ ಆಯಿತು. ಪ್ರತಿದಿನ ಬಹಿರಂಗ ಸಭೆ ಸೇರಿದಾಗ ಹತ್ತಾರು ಸಾವಿರ ಜನ ಬರುತ್ತಿದ್ದರು. ಮೆರವಣಿಗೆಗಳು ನಡೆದಾಗಲೆಲ್ಲ ಸ್ತ್ರೀಯರು, ಮಕ್ಕಳು, ವಿದ್ಯಾರ್ಥಿಗಳು ಸೇರಿ ೧೦ ಸಾವಿರ ಜನರಾದರೂ ಇರುತ್ತಿದ್ದರು. ಅರಸೀಕರೆ ತಾಲ್ಲೂಕು ಆಫೀಸಿನ ಮುಂದೆ ಸತ್ಯಾಗ್ರಹ ನಡೆಯುತ್ತಿದ್ದು ಆಫೀಸುಗಳ ಮೇಲೆ ಧ್ವಜ ಹಾರಿಸಲು ಯತ್ನಿಸಿದಾಗ ಅನೇಕ ಜನರನ್ನು ಬಂಧಿಸಿ ಮರುದಿನ ಬಿಡುಗಡೆ ಮಾಡುತ್ತಿದ್ದರು. ೧೯೪೨ ಸೆಪ್ಟೆಂಬರ್‌ನಲ್ಲಿ ಅರಸೀಕೆರೆ ತಾಲ್ಲೂಕು ಕಚೇರಿಯ ಎದುರು ೨೦ ಸಾವಿರ ಜನ ಸಭೆ ಸೇರಿ ಕಚೇರಿಯಲ್ಲಿ ಕೆಲಸಕ್ಕೆ ಅಡಚಣೆ ಮಾಡುವ ಚಳವಳಿ ಮದ್ಯದಂಗಡಿ ಪಿಕೆಟಿಂಗ್, ಈಚಲಮರ ಕಡಿಯುವುದು, ತಂತಿ ಕತ್ತರಿಸುವುದು, ರೈಲ್ವೆ ಬ್ರಿಡ್ಜ್ ಹಾಳು ಮಾಡುವುದು, ರೈಲ್ವೆ ಸ್ಟೇಷನ್ ಸುಡುವುದು ಇತ್ಯಾದಿಗಳು ಹಾಸನ ಮತ್ತು ಅರಸೀಕೆರೆ ಪ್ರದೇಶಗಳಲ್ಲಿ ಸರ್ವೆ ಸಾಮಾನ್ಯವಾಗಿದ್ದವು.

ಟಿಕೇಟ್ ಇಲ್ಲದೆ ಪ್ರಯಾಣ ಮಾಡಿ ಚಳವಳಿಯಲ್ಲಿ ಪಾಲ್ಗೊಳ್ಳುತ್ತಿದ್ದರು. ಜನರು ಆಗ ಅರಸೀಕೆರೆಯಲ್ಲಿ ಹೆಚ್ಚು ಜನರು ಇಳಿಯುತ್ತಿದ್ದರು. ಕಾರಣ

ಇದು ಜಂಕ್ಷನ್ ಸ್ಥಳವಾಗಿತ್ತು. ಈ ಸತ್ಯಾಗ್ರಹಿಗಳು ನಿತ್ಯ ನೂರಾರು ಜನ ಬರುತ್ತಿದ್ದು ಇವರ ಊಟ, ತಿಂಡಿ ವ್ಯವಸ್ಥೆಯನ್ನು ಅರಸೀಕೆರೆ ನಾಯಕರು ಮಾಡಿ ಕೊಡುತ್ತಿದ್ದರು. ಪ್ರತಿ ದಿನ ಇದಕ್ಕೆ ಸಾವಿರಾರು ರೂ. ಖರ್ಚು ಆಗುತ್ತಿತ್ತು. ಈ ಹಣವನ್ನೆಲ್ಲ ಅರಸೀಕೆರೆ ಊರಿನವರೇ ಮತ್ತು ಗ್ರಾಮಾಂತರ ಪ್ರದೇಶಗಳ ಜನರೇ ಕೊಡುತ್ತಿದ್ದರು. ಚಳವಳಿ ಬಿರುಸಾಗಿ ನಡೆದು ಒಂದೇ ದಿನ ಬಾಣಾವರ, ತಿಪಟೂರು ರೈಲ್ವೆ ಸ್ಟೇಷನ್ ಸುಟ್ಟುಹೋಗಿ ಗ್ರಾಮಾಂತರ ಪ್ರದೇಶಗಳಿಗೆ ಚಳವಳಿ ಹರಡಿ ಉಗ್ರ ಸ್ವರೂಪ ಪಡೆದುಕೊಂಡಿತು. ಸಭೆ, ಸಮಾರಂಭಗಳು ನಡೆಯುವ ವೇಳೆಗೆ ಮಿಲಿಟರಿಯವರು ಬೀಡು ಬಿಡುವುದು ಸಾಮಾನ್ಯವಾಗಿತ್ತು.

ಹಾರನಹಳ್ಳಿ ರಾಮಸ್ವಾಮಿಯಂತಹ ಯುವ ವಿದ್ಯಾರ್ಥಿ ನಾಯಕ, ಎ. ಜಿ. ರಾಮಚಂದ್ರರಾವ್, ಬೇಲೂರಿನ ಬಿ. ಎನ್. ಬೋರಣ್ಣಗೌಡ, ಹೊಳೆನರಸೀಪುರ ಸೂರ್ಯನಾರಾಯಣ ಶೆಟ್ಟಿ, ಗುಂಡೂರಾಮಯ್ಯ. ಚನ್ನರಾಯಪಟ್ಟಣದ ಸಂಜೀವ ಶೆಟ್ಟಿ, ನರಸಣ್ಣ, ಅರಸೀಕೆರೆಯ ಡಿ. ವಿ. ರಾಮಸ್ವಾಮಿ, ಶಂಕರ ಸಿಂಗ್, ಬಿ. ವಿಠಲಾಚಾರಿ, ಜಿ. ವಿಶ್ವನಾಥ ಶೆಟ್ಟಿ, ಡಾ.ಕರಿಸಿದ್ದಪ್ಪ, ಕೆ. ಪಂಚಾಕ್ಷರಯ್ಯ, ಕೆ. ಎಂ. ವೆಂಕಟರಮಣ ಶೆಟ್ಟಿ, ಲಕ್ಷ್ಮೀನಾರಾಯಣ ಶೆಟ್ಟಿ, ಸಿ. ಹೆಚ್. ವೀರಣ್ಣ ಮುಂತಾದವರ ಸೇವೆ ಅನನ್ಯ.

೧೯೪೨ರಲ್ಲಿ ತುಮಕೂರಿನ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ಓದುತ್ತಿದ್ದ ಹಾರನಹಳ್ಳಿ ರಾಮಸ್ವಾಮಿಯವರು ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ನೇರವಾಗಿ ಧುಮುಕಿದರು. ಹಾಸನ ತಾಲ್ಲೂಕು ಸಾಲಗಾಮೆ ಹೋಬಳಿ, ಅರಸೀಕೆರೆ ತಾಲ್ಲೂಕಿನ ಹಾರನಹಳ್ಳಿ ಹೋಬಳಿಯ ವಿಶಾಲ ಅರಣ್ಯ ಪ್ರದೇಶದ ನಲವತ್ತು ಹಳ್ಳಿಗಳು ಇವರ ಕಾರ್ಯಕ್ಷೇತ್ರವಾಯಿತು. ಈ ನಲವತ್ತು ಹಳ್ಳಿಗಳು ಸ್ವಾತಂತ್ರ್ಯ ಭಾರತಾಂಬೆಯ ಕನಸಿನಲ್ಲಿ ಘೋಷಿಸಿಕೊಂಡ ಪ್ರಜಾರಾಜ್ಯವನ್ನು ಸ್ಥಾಪಿಸಿಕೊಂಡಿತ್ತು. ಈ ಪ್ರಜಾರಾಜ್ಯ ಸ್ಥಾಪನೆಗೆ ಮೂಲ ಕಾರಣ ಶ್ರೀಯುತ ಹಾರನಹಳ್ಳಿಯವರ ಪ್ರೇರಣೆ ಮತ್ತು ಪ್ರೋತ್ಸಾಹ ಪ್ರಮುಖವಾಗಿತ್ತು. ಪ್ರತಿ ಹಳ್ಳಿಗಳಿಗೂ ಭೇಟಿ ನೀಡಿ ಜನರನ್ನು ಬಡಿದೆಬ್ಬಿಸುವ ಕಾರ್ಯದಲ್ಲಿ ತೊಡಗಿದ್ದರು. ಈ ಗ್ರಾಮಗಳಿಂದ ಭೂ ಕಂದಾಯ ಸರ್ಕಾರಕ್ಕೆ ಹೋಗುವಂತಿರಲಿಲ್ಲ. ಸರ್ಕಾರಿ ಅಧಿಕಾರಿ, ನೌಕರರು ಇಲ್ಲಿಗೆ ಬರುವಂತಿರಲಿಲ್ಲ. ಪೊಲೀಸರ ಕೈಗೆ ಸಿಗದೇ ರಾತ್ರಿ ವೇಳೆಯಲ್ಲಿ ಹಳ್ಳಿಹಳ್ಳಿಗಳಿಗೆ ಭೇಟಿ ನೀಡಿ ಮಿಂಚಿನ ಭೇಟಿಯ ಮೂಲಕ ಹೋರಾಟಕ್ಕೆ ಜನರನ್ನು ರಾಮಸ್ವಾಮಿಗಳು ಹುರಿದುಂಬಿಸಿದರು. ಮಧ್ಯ ರಾತ್ರಿಯಲ್ಲಿಯೇ ಊರಿನ ಪ್ರಮುಖರು ದೇಶಪ್ರೇಮಿಗಳು ಇವರ ಆಗಮನಕ್ಕಾಗಿ ಕಾಯ್ದು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದರು. ಇಷ್ಟೆಲ್ಲಾ ಭರದ ಸಿದ್ದತೆಗಳ ನಡುವೆ ಸರ್ಕಾರವೇನೂ ಕಣ್ಣುಮುಚ್ಚಿ ಕುಳಿತಿರಲಿಲ್ಲ. ಮೀಸಲು ಪೊಲೀಸರನ್ನು ಹಳ್ಳಿ ಹಳ್ಳಿಗೆ ನುಗ್ಗಿಸಿ ಜನರಿಗೆ ನಾನಾ ರೀತಿಯ ಹಿಂಸೆಯನ್ನು ಕೊಡುತ್ತಿದ್ದರು. ಗೋಲಿಬಾರಿನಿಂದ ಅನೇಕ ಜನರ ಪ್ರಾಣವನ್ನೆ ಬಲಿ ತೆಗೆದುಕೊಂಡರು.



ಹಾರನಹಳ್ಳಿ ರಾಮಸ್ವಾಮಿಯರು ಸೇರಿದಂತೆ ಯುವ ಹೋರಾಟಗಾರರು ಕ್ವಿಟ್ ಇಂಡಿಯಾ ಚಳವಳಿಯ ವೇಳೆಗೆ ಇಡೀ ಜಿಲ್ಲೆಯ ಆಡಳಿತ ವ್ಯವಸ್ಥೆಯನ್ನು ಬೆಚ್ಚಿ ಬೀಳಿಸಿ ನಿದ್ರೆಗೆಡಿಸಿದ್ದರು. ಅಂತಹ ಕ್ರಾಂತಿಕಾರಿ ಪ್ರದೇಶಗಳಲ್ಲಿ ಹಾಸನ ತಾಲ್ಲೂಕು ಸಾಲಿಗಾಮೆ ಹೋಬಳಿ, ಅರಸೀಕೆರೆ ತಾಲ್ಲೂಕಿನ ಹಾರನಹಳ್ಳಿ ಸೇರಿದ್ದ ವಿಶಾಲ, ಅರಣ್ಯ ಪ್ರದೇಶವನ್ನಾಧರಿಸಿದ ೪೦ ಹಳ್ಳಿಗಳು ಅವರ ಕಾರ್ಯಕ್ಷೇತ್ರವಾಗಿತ್ತು. ಅಷ್ಟೇ ಅಲ್ಲ. ಆ ನಲವತ್ತು ಹಳ್ಳಿಗಳನ್ನು ಸ್ವತಂತ್ರ್ಯ ಭಾರತವೆಂದೂ ಘೋಷಿಸಿಬಿಟ್ಟರು. ಆ ಹಳ್ಳಿಗಳಿಂದ ಭೂ ಕಂದಾಯ ಸರ್ಕಾರಕ್ಕೆ ಹೋಗುವಂತಿಲ್ಲವೆಂದು ಸಾರಿದರು. ಸರ್ಕಾರಿ ನೌಕರರು ಅಧಿಕಾರಿಗಳು ಅಲ್ಲಿಗೆ ಬರುವುದಕ್ಕೆ ಅವಕಾಶ ನೀಡುವುದಿಲ್ಲವೆಂದಿದ್ದರು. ನಾಯಕರಾಗಿ ರಾಮಸ್ವಾಮಿಯವರು ಹಳ್ಳಿ ಹಳ್ಳಿಗಳಿಗೆ ಮಿಂಚಿನ ಭೇಟಿ ನೀಡುತ್ತಾ ಜನರನ್ನು ಹೋರಾಟಕ್ಕೆ ಹುರಿದುಂಬಿಸುತ್ತಿದ್ದರು. ಪೊಲೀಸರ ಕೈಗೆ ಸಿಕ್ಕದಂತೆ ರಾತ್ರಿ ವೇಳೆಯಲ್ಲಿ ತಮ್ಮ ಓಡಾಟವನ್ನು ನಡೆಸುತ್ತಿದ್ದರು. ಆದರೆ ಸರ್ಕಾರವೇನೂ ಕಣ್ಣು ಮುಚ್ಚಿ ಕುಳಿತಿರಲಿಲ್ಲ. ಮೀಸಲು ಪಡೆ ಪೊಲೀಸರನ್ನು ಹಳ್ಳಿ ಹಳ್ಳಿಗೆ ನುಗ್ಗಿಸಿ ಜನರಿಗೆ ನಾನಾ ರೀತಿಯಲ್ಲಿ ಹಿಂಸೆ ಕೊಡುವಂತೆ ಮಾಡಿದರು. ಆ ಸಮಯದಲ್ಲಿ ಎರಡು ಮೂರು ಕಡೆ ಜನ ಸತ್ತುಹೋಗಿದ್ದರು. ಆದರೂ ರಾಮಸ್ವಾಮಿಯವರು ಪೊಲೀಸರಿಗೆ ಸಿಕ್ಕದೇ ಚಳ್ಳೆಹಣ್ಣು ತಿನ್ನಿಸುತ್ತಾ ಜನರನ್ನು ಚಳುವಳಿಗೆ ಹುರಿದುಂಬಿಸುತ್ತಿದ್ದುದನ್ನು ಕಂಡ ಸರ್ಕಾರ ರೋಸಿ ಹೋಗಿ ಅವರನ್ನು ಸೆರೆ ಹಿಡಿಯಲು ಪ್ರಯತ್ನಿಸಿ ಸಾಧ್ಯವಾಗುವುದಿಲ್ಲವೆಂದು ಅರಿತಾಗ ಕಂಡಲ್ಲಿ ಗುಂಡಿಟ್ಟು ಕೊಲ್ಲುವ ಭಯಾನಕ ಆಜ್ಞೆಯನ್ನೇ ಹೊರಡಿಸಿಬಿಟ್ಟಿತು.

ಇಡೀ ದೇಶದಲ್ಲೇ ಕ್ವಿಟ್ ಇಂಡಿಯಾ ಚಳವಳಿ ಉಗ್ರರೂಪಕ್ಕೆ ತಿರುಗಿತ್ತು. ಹಾಸನ ಅರಸೀಕೆರೆ ತಾಲ್ಲೂಕಿನ ೪೦ ಹಳ್ಳಿಗಳೂ ಇದಕ್ಕೆ ಹೊರತಾಗಿರಲಿಲ್ಲ. ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕು ಜನ ಸಮುದಾಯವೂ ಕೂಡಾ

ಕ್ವಿಟ್ ಇಂಡಿಯಾ ಚಳವಳಿಯ ಹಿಂಸಾತ್ಮಕ ಹೋರಾಟದ ದಾರಿ ಹಿಡಿದ್ದರು. ಕಾಂತರಾಜಪುರ ಎಂಬ ಪುಟ್ಟ ಗ್ರಾಮ ಕ್ರಾಂತಿಕಾರಿ ಚಟುವಟಿಕೆಯ ಕೇಂದ್ರವಾಗಿತ್ತು. ಜಿಲ್ಲೆಯ ವಿವಿಧ ಹೋರಾಟಗಾರರು ಕಾಂತರಾಜಪುರಕ್ಕೆ ಭೇಟಿ ನೀಡಿ ವಿಚಾರಪೂರಿತ ಭಾಷಣ ಮಾಡಿ ಕ್ರಾಂತಿಯ ಕಿಡಿಗೆ ತುಪ್ಪ ಸುರಿಯುತ್ತಿದ್ದರು. ಇಂತಹ ಕಾರ್ಯಗಳಿಂದ ಪ್ರೋತ್ಸಾಹ ಹೊಂದಿ ಹಲವು ಶ್ಯಾನುಭೋಗರು ಶ್ಯಾನುಭೋಗಿಕೆಯ ದಫ್ತರುಗಳನ್ನೆಲ್ಲಾ ತಹಶೀಲ್ದಾರರ ಬಳಿಗೆ ತೆಗೆದುಕೊಂಡು ಹೋಗಿ ಎಸೆದು, 'ನಮಗೆ ನಿಮ್ಮ ಗುಲಾಮಗಿರಿ ಬೇಕಾಗಿಲ್ಲ' ಎಂದು ಬಂದಿದ್ದರು. ಹಲವು ಪಟೇಲರು ರಾಜಿನಾಮೆ ಕೊಟ್ಟಿದ್ದರು. ವಿಧ್ವಂಸಕ ಚಟುವಟಿಕೆಗಳನ್ನು ಎಲ್ಲ ಕಡೆ ಜನ ನಡೆಸಿದ್ದರು. ಇಂತಹ ಯುವಕರ ಮೇಲೆ ಸರ್ಕಾರ 'ಕಂಡಲ್ಲಿ ಗುಂಡಿಕ್ಕಿ' ಎಂಬ ಆದೇಶವನ್ನು ಸರ್ಕಾರ ಹೊರಡಿಸಿದಾಗ ಅರಸೀಕೆರೆ ತಾಲ್ಲೂಕಿನ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಆಗಿದ್ದ ಗೌಡಯ್ಯನವರು ಆ ಸುದ್ದಿಯನ್ನು ಅವರ ಪೋಷಕರಿಗೆ ತಿಳಿಸಿದ್ದರು. ಅವರಿಗೆ ತುಂಬಾ ಭಯವಾಗಿತ್ತು. ಅವರ ಕುಟುಂಬದವರು ನಡುಗಿ ಹೋಗಿ ದುಃಖದ ಸಾಗರದಲ್ಲಿ ಮುಳುಗಿ ಹೋಗಿದ್ದರು. ತಮ್ಮ ಮನೆಗಳಲ್ಲಿ ಹುಡುಗರು ವೃಥಾ ಪೊಲೀಸ್ ಗುಂಡಿಗೆ ಬಲಿಯಾಗಿ ಬಿಡುತ್ತಾರೆ ಎಂದು ಆತಂಕದಿಂದ ಪೊಲೀಸರಿಗೆ ಇವರುಗಳ ಬಗ್ಗೆ ತಿಳಿಸಲು ನಿಶ್ಚಯಿಸಿದರು.

ಒಂದು ದಿನ ಈ ಯುವ ಹೋರಾಟಗಾರರು ರಾಮಸ್ವಾಮಿಯವರ ನಾಯಕತ್ವದಲ್ಲಿ ಹಳ್ಳಿಗಳ ಕಾಡಿನ ದಾರಿಯ ಮೂಲಕ ನಡೆದು ಉತ್ತರ ಕರ್ನಾಟಕದ ಕಡೆಗೆ ಹೊರಟಿದ್ದರು. ವೆಂಕಟದಾಸಪ್ಪ ಎಂಬುವವರು ಪೊಲೀಸರಿಗೆ ಆ ಮಾಹಿತಿ ಕೊಟ್ಟರು. ಈ ಯುವ ಹೋರಾಟಗಾರರು ಅರಸೀಕೆರೆಯಿಂದ ಬಾಣಾವರದ ಕಡೆ ಹೋಗುವ ಬಸ್ಸೊಂದಕ್ಕೆ ಕೈ ತೋರಿಸಿದ್ದರು. ಹತ್ತಿ ಒಳಗೆ ನೋಡುತ್ತಾರೆ. ಅಲ್ಲಿ ಪೊಲೀಸರೇ ತುಂಬಿದ್ದರು. ಕ್ಷಣ ಮಾತ್ರದಲ್ಲಿ ಇವರೆಲ್ಲಾ ದಂಗು ಬಡಿದುಹೋದರು. ಬನ್ನಿ ಈಗೆಲ್ಲಿಗೆ ಹೋಗುತ್ತೀರೀ? ಎಂದು ಹೇಳುತ್ತಾ ಬರಮಾಡಿ ಕೊಂಡಿದ್ದರು. ಬಂಧಿಸಿ ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಹಾಕಿದ್ದರು. ೩ ತಿಂಗಳು ಸೆರೆವಾಸದಿಂದ ಅವರು ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ಸೆಂಟ್ರಲ್ ಜೈಲಿನಲ್ಲಿ ಕಳೆದಿದ್ದರು. ಆದರೆ ಚಳವಳಿ ಇಷ್ಟಕ್ಕೆ ನಿಲ್ಲಲಿಲ್ಲ ಮತ್ತಷ್ಟು ಉಗ್ರ ಸ್ವರೂಪವನ್ನು ಪಡೆಯಿತು. ಗಾಂಧೀಜಿಯವರ ಪ್ರೇರಣೆಯಂತೆ ಈ ಭಾಗದಲ್ಲಿ ಚಳವಳಿಯನ್ನು ತೀವ್ರಗೊಳಿಸಿ ಬ್ರಿಟಿಷ್ ಸರ್ಕಾರಕ್ಕೆ ಸಡ್ಡು ಹೊಡೆದು ಕರನಿರಾಕರಣೆ ಚಳುವಳಿ ನೆಡೆಸಿ ರಾಜ್ಯದ ಗಮನವನ್ನು ಸೆಳೆದರು. ಸ್ವಾತಂತ್ರ್ಯ



ಚಳವಳಿಯ ಕೊನೆಯ ಭಾಗ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಇಡೀ ಕರ್ನಾಟಕದ ಗಮನ ಸೆಳೆದ ಚಳುವಳಿ ಎಂದರೆ ಹಾಸನ ಜಿಲ್ಲೆಯಾದ್ಯಂತ ನಡೆದ 'ಸಂತೆ ಸುಂಕ ನಿರಾಕರಣ' ಚಳವಳಿ. ಹಾಸನ ಜಿಲ್ಲೆಯಾದ್ಯಂತ ನಡೆದ ಈ ಚಳವಳಿಯಲ್ಲಿ ಎಲ್ಲ ವರ್ಗದ ಜನ ಸಾಮಾನ್ಯರು, ರೈತಾಪಿ ವರ್ಗದವರು ಭಾಗವಹಿಸಿ ಇಡೀ ದೇಶದ ಜನತೆಯ ಗಮನವನ್ನು ಸೆಳೆದಿದ್ದರು. ಗಾಂಧಿಜೀಯವರನ್ನು ಒಳಗೊಂಡಂತೆ ಎಲ್ಲಾ ನಾಯಕರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು. ಹಾಸನ ತಾಲ್ಲೂಕಿನ ಹಳ್ಳಿಗಳಲ್ಲಿ ಸಂತೆಗಳು ನಡೆಯುತ್ತಿದ್ದು, ಹಳ್ಳಿಗಳ ಸುತ್ತಮುತ್ತಲ ಪ್ರದೇಶಗಳನ್ನು ರೈತಾಪಿ ವರ್ಗ ದಿನ ನಿತ್ಯದ ಸರಕು ಸಾಮಾನುಗಳನ್ನು ಸಂತೆ ಪ್ರದೇಶಗಳಿಗೆ ಹೊತ್ತು ತಂದು ಮಾರಾಟ ಮಾಡುತ್ತಿದ್ದರು. ಇಂತಹ ಸಂತೆಗಳು ಹಳೇಬೀಡು, ಜಾವಗಲ್, ಹಾರನಹಳ್ಳಿ, ಬಾಣಾವರ, ಅರಸಿಕೆರೆ ಮುಂತಾದ ಸ್ಥಳಗಲ್ಲಿ ಬೃಹತ್ ಪ್ರಮಾಣದಲ್ಲಿ ನಡೆಯುತ್ತಿದ್ದು ರೈತಾಪಿವರ್ಗದವರ ಬೃಹತ್ ಆರ್ಥಿಕ ಚಟುವಟಿಕೆಗಳ ತಾಣವಾಗಿತ್ತು. ಜೊತೆಗೆ ಇಂತಹ ಬೃಹತ್ ಸಂತೆಗಳಲ್ಲಿ ಸಂತೆ ನಡೆಯುವ ಪ್ರದೇಶದ ಸುತ್ತ ಮುತ್ತ ಹಳ್ಳಿಗಳಿಂದ ಜನರು ಬಂದು ಸೇರುತ್ತಿದ್ದರು. ಹೀಗಾಗಿ ಹಾಸನಜಿಲ್ಲೆ ಕಾಂಗ್ರೆಸ್‌ನ ನಾಯಕರುಗಳು ಇಂತಹ ಸಂತೆಗಳಲ್ಲಿ ಹೋಗಿ ಜನರಲ್ಲಿ ದೇಶಭಕ್ತಿ ಮೂಡಿಸಿ ಜನರನ್ನು ಆಂದೋಲನ ನಡೆಸುವಂತೆ ಪ್ರೇರೇಪಿಸುತ್ತಿದ್ದರು ಹಾಗೂ ಇಂತಹ ಸಂತೆಗಳು ಆರ್ಥಿಕ ಚಟುವಟಿಕೆಗಳ ಕೇಂದ್ರವಾಗಿದ್ದರಿಂದ ಬ್ರಿಟಿಷ್ ಸರ್ಕಾರ ಹಾಗೂ ಸ್ಥಳೀಯ ಸರ್ಕಾರಗಳು ಇಂತಹ ಸಂತೆಗಳಲ್ಲಿ ಹೆಚ್ಚಿನ ಪ್ರಮಾಣದ ಸುಂಕವನ್ನು ವಸೂಲಿ ಮಾಡುತ್ತ ತನ್ನ ಖಜಾನೆಯನ್ನು ತುಂಬಿಸಿಕೊಳ್ಳುತಿತ್ತು. ೧೯೪೨ ಕ್ವಿಟ್ ಇಂಡಿಯಾ ಚಳುವಳಿಯ ವೇಳೆಗೆ ಇಡೀ ಹಾಸನ ಜಿಲ್ಲೆಯ ಸಂತೆಗಳಲ್ಲಿ ಹಾಸನ ಜಿಲ್ಲಾ ಕಾಂಗ್ರೆಸ್ ನಾಯಕರ ಮಾರ್ಗದರ್ಶನದಲ್ಲಿ ರೈತಾಪಿವರ್ಗ ಸರ್ಕಾರ ವಸೂಲಿ ಮಾಡುತ್ತಿದ್ದ ಸುಂಕವನ್ನು ನೀಡದಿರುವಂತೆ ಕರೆ ನೀಡಿ ಸಂತೆ ಸುಂಕ ನಿರಾಕರಣೆ ಆಂದೋಲನವನ್ನು ಆರಂಭಿಸಿದರು. ಚನ್ನರಾಯಪಟ್ಟಣ ತಾಲ್ಲೂಕಿನ ಶ್ರೀನಿವಾಸಪುರ ಹಾಗೂ ಶ್ರವಣಬೆಳಗೊಳದಲ್ಲಿ, ಹಾಸನ ತಾಲ್ಲೂಕಿನ ಅನೇಕ ಸ್ಥಳಗಳು, ಹಳೇಬೀಡು, ಬೇಲೂರು, ಜಾವಗಲ್, ಗಂಡಸಿ, ಸಾಲಗಾಮೆ, ದುದ್ದ ಮುಂತಾದ ಸ್ಥಳಗಲ್ಲಿ ಸಂತೆ ಸುಂಕ ನಿರಾಕರಣೆ ಚಳುವಳಿಗಳು ತೀವ್ರ ಪ್ರಮಾಣದಲ್ಲಿ ನಡೆದು ಜಿಲ್ಲೆ ಮತ್ತು ಆಡಳಿತವನ್ನು ಬೆಚ್ಚಿ ಬೀಳಿಸುವಂತೆ ಮಾಡಿತು. ಚನ್ನರಾಯಪಟ್ಟಣ ತಾಲ್ಲೂಕಿನ ಶ್ರವಣಬೆಳಗೊಳದಲ್ಲಿ ನಡೆದ ಸಂತೆ ಸುಂಕ ನಿರಾಕರಣೆ ಚಳುವಳಿಯಲ್ಲಿ ಸುಮಾರು ೨೦೦೦ ಜನ

ಆ ಸಂತೆಯಲ್ಲಿ ಭಾಗವಹಿಸಿದ್ದು, ಬ್ರಿಟಿಷ್ ಕಂದಾಯ ವಸೂಲಿಗಾರನೊಬ್ಬ ಬಲವಂತದಿಂದ ರೈತರಿಂದ ಕಂದಾಯ ವಸೂಲಿಯಲ್ಲಿ ತೊಡಗಿ, ಕಂದಾಯ ಕೊಡಲು ನಿರಾಕರಿಸುವ ಮುಗ್ಧ ಗ್ರಾಮೀಣ ಪ್ರದೇಶದ ಜನರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿ ಅವರನ್ನು ಥಳಿಸುತ್ತಾ ಬರುತ್ತಿದ್ದರು. ಈ ದೃಶ್ಯವನ್ನು ಕಂಡು ಶ್ರವಣಬೆಳಗೊಳ ಸಂತೆಯಲ್ಲಿ ಭಾಗವಹಿಸಿದ ನೂರಾರು ಜನ ಹಳ್ಳಿಗರು ಶ್ರವಣಬೆಳಗೊಳದ ಬೆಟ್ಟದ ಸಂದಿಯಲ್ಲಿ ಅವಿತುಕೊಂಡು ಕಂದಾಯ ವಸೂಲಿಗಾರರಿಗೆ ಕಲ್ಲಿನಿಂದ ಹೊಡೆದು ಇಡೀ ಅವರ ದೇಹವನ್ನು ರಕ್ತ ಸಿಕ್ತ ಗೊಳಿಸಿ ಅವರ ಸಾವಿಗೆ ಕಾರಣರಾದರು. ಈ ಅವಮಾನ ಸಹಿಸದ ಪೊಲೀಸರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಸಂತೆ ನಡೆದ ಸ್ಥಳದಲ್ಲಿ ಗೋಲಿಬಾರ್ ಮಾಡಿ ಹೆಂಗಸರು, ಮಕ್ಕಳು ಎನ್ನದೆ ತಮ್ಮ ಬೂಟು ಕಾಲಿನಿಂದ ಮಾರಣಾಂತಿಕವಾಗಿ ಥಳಿಸಿದರು.ಈ ಒಂದು ಘಟನೆಯಲ್ಲಿ ಐದು ಜನ ಮರಣ ಹೊಂದಿದರು.ಈ ಒಂದು ಘಟನೆಯು ಶ್ರವಣಬೆಳಗೊಳದ ದುರಂತ ಎಂದೇ ಪ್ರಸಿದ್ಧಿಯಾಗಿದೆ. ಅದೇ ರೀತಿ ಹಾಸನ ತಾಲ್ಲೂಕಿನ ನಿಟ್ಟೂರು ಗ್ರಾಮದ ೧೦ ಜನ ಹಾಗೂ ಬೇಲೂರು ತಾಲ್ಲೂಕಿನ ಗಂಗೂರಿನ ಗ್ರಾಮಸ್ಥರು ಬಿ.ಎನ್. ಬೋರಣ್ಣಗೌಡರ ಮಾರ್ಗದರ್ಶನದಲ್ಲಿ ನೂರಾರು ಜನ ಕಾರ್ಯಕರ್ತರು ಜಾವಗಲ್‌ನ ಸಂತೆಯಲ್ಲಿ ಸುಂಕ ನಿರಾಕರಣಾ ಚಳುವಳಿಯನ್ನು ನಡೆಸಿ, ಕೈಗೆ ಸಿಕ್ಕ ಬ್ರಿಟಿಷ್ ಅಧಿಕಾರಿಗಳನ್ನು ಹಾಗೂ ಕಂದಾಯ ವಸೂಲಿಗಾರರನ್ನು ತಳಿಸಿ ಸ್ಥಳದಿಂದ ಪರಾರಿಯಾದರು. ನಂತರ ಬೇಲೂರು ತಾಲ್ಲೂಕಿನ ಗಂಗೂರಿನ ಮುಖಂಡರಾದ ಹೀರೇಗೌಡರ ಮನೆಯಲ್ಲಿ ನೂರಾರು ಕಾರ್ಯಕರ್ತರು ಬೋರಣ್ಣಗೌಡರ ನಾಯಕತ್ವದಲ್ಲಿ ಭಾಗವಹಿಸಿ, ಮುಂದಿನ ರೂಪುರೇಷೆಗಳನ್ನು ಚರ್ಚಿಸುತ್ತಿದ್ದರು. ನಿಟ್ಟೂರು, ಸೊಪ್ಪಿನಹಳ್ಳಿ, ಯಲಗುಂದ, ಕುದುರುಗುಂಡಿ, ಮುತ್ತತ್ತಿ, ಮುದ್ದಾಪುರ, ಐದಳ್ಳ, ಗಂಗೂರು, ಈ ಪ್ರಾಂತ್ಯಗಳಿಗೆ ಮಾರ್ಗದರ್ಶನ ನೀಡುತ್ತಿದ್ದರು. 'ಐದಳ್ಳದ ಹುಲಿ' ಎಂದೆ ಪ್ರಖ್ಯಾತರಾಗಿದ್ದ ಸೊಪ್ಪಿನಹಳ್ಳಿ ಗ್ರಾಮದ ಕುಳ್ಳೇಗೌಡರ ದಕ್ಷ ನಾಯಕತ್ವದಿಂದ ಆ ಪ್ರದೇಶದ ಜನರು ಸುತ್ತಮುತ್ತಲ ಹಳ್ಳಿಗಳಲ್ಲಿ ನಡೆದ ಸುಂಕ ನಿರಾಕರಣಾ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು.ಹಾಗಾಗಿ ಜನರೆಲ್ಲರೂ ಗಂಗೂರಿನ ಹಿರೇಗೌಡರ ಮನೆಯಲ್ಲಿ ಸಭೆ ಸೇರಿದ್ದರು. ವಿಷಯ ತಿಳಿದ ಪೊಲೀಸರು ಸ್ಥಳಕ್ಕೆ ಆಗಮಿಸಿ ಮುಗ್ಧ ಜನರ ಮೇಲೆ ಗೋಲಿಬಾರ್ ನಡೆಸಿದರು. ಈ ಗೋಲಿಬಾರ್‌ನಿಂದ ಇಬ್ಬರು ಸ್ಥಳದಲ್ಲಿ ಮೃತರಾದರೆ ಅನೇಕ ಮಂದಿ ಗಾಯಾಳುಗಳಾದರು. ಇಂತಹ ಚಳುವಳಿಗಳ ಹಿಂದೆ ವಿದ್ಯಾರ್ಥಿ ಮುಖಂಡ ಹಾಗೂ ಶಿಸ್ತಿನ ಸಿಪಾಯಿ ಶ್ರೀ ಹಾರನಹಳ್ಳಿ ರಾಮಸ್ವಾಮಿಯವರ ಹೋರಾಟ ಬಹಳ ಪ್ರಮುಖವಾಗಿತ್ತು ಹಾಗೂ ಅವರು ಈ ಹೋರಾಟದ ಪ್ರಮುಖ ರೂವಾರಿಗಳಲ್ಲೊಬ್ಬರಾಗಿದ್ದರು.



೧೯೪೨ರ ಫೆಬ್ರವರಿಯಲ್ಲಿ ಯಶೋಧರ ದಾಸಪ್ಪರವರು ಹಾಸನ ತಾಲ್ಲೂಕಿನ ಶ್ರೀ ಬೂದೇಶ್ವರ ಸ್ವಾಮಿ ಮಠದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡಿ, ಆ ಪ್ರದೇಶದ ಜನರಲ್ಲಿ ರಾಷ್ಟ್ರೀಯ ಜಾಗೃತಿ ಮೂಡಿಸಿದ್ದರು.ಸುತ್ತ ಮುತ್ತಲ ಗ್ರಾಮಗಳಲ್ಲಿ ಕಂದಾಯ ಕೊಡಬಾರದು, ಸಂತೆಗಳಲ್ಲಿ ಸುಂಕ ಕೊಡಬಾರದೆಂದು ಪ್ರಚಾರ ಮಾಡಿದರು. ಸೊಪ್ಪಿನಹಳ್ಳಿ ಕುಳ್ಳೇಗೌಡ, ಹಳಸಿನಹಳ್ಳಿ ಹನುಮಂತೇಗೌಡ, ಸಂಜೀವೇಗೌಡ, ಇನ್ನು ಅನೇಕ ಉತ್ಸಾಹಿ, ಜಾಗೃತಿ ಹೊಂದಿದ ಜನತೆ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು.ಸೇಂದಿ ಅಂಗಡಿಗಳನ್ನು ಲೂಟಿ ಮಾಡುವುದು ಜೊತೆಗೆ ಸಂತೆಗಳಲ್ಲಿ ಸುಂಕ ನೀಡಬಾರದೆಂದು ಮನವೊಲಿಸುವುದು ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಪೊಲೀಸರು ಬಂದಾಗ ಕಾಡಿಗೆ ಓಡಿ ಹೋಗುವುದು ಮಾಮೂಲಾಗಿತ್ತು. ಒಂದು ದಿನ ಬೆಳಗ್ಗೆ ಹಾಸನ ತಾಲ್ಲೂಕಿನ ನಿಟ್ಟೂರಿಗೆ ೩೦೦ ಜನ ಮಿಲಿಟರಿಯವರು ಕುದುರೆ ಸವಾರಿ ಸಹಿತ ಬಂದು ಮುತ್ತಿಗೆ ಹಾಕಿ ಈ ಊರಿನ ಹಾಗೂ ಸುತ್ತ ಮುತ್ತಲು ೫೦–೬೦ ಜನ ಕಾರ್ಯಕರ್ತರನ್ನು ಬಂಧಿಸಿ ಯಲಗುಂದ ಟಿ.ಬಿ. ಬಂಗಲೆಯಲ್ಲಿ ಬಂಧಿಸಿಡಲಾಯಿತು. ಈ ಕಾರ್ಯಕರ್ತರಿಗೆ ಹಾಸನದಲ್ಲಿ ೮ ತಿಂಗಳು ಕಠಿಣ ಸಜೆ ೨೦೦ ರೂ.ದಂಡ ವಿಧಿಸುತ್ತಿದರು. ಈ ಹೋರಾಟದಲ್ಲಿ ಜಿಲ್ಲೆಯ ಹೆಸರಾಂತ ನಾಯಕರಾದ ಬೋರಣ್ಣಗೌಡ್ರು, ಕಣಗಾಲ್ ಚಿಕ್ಕೆಗೌಡ್ರು, ಅಡಗೂರು ಮಡಿವಾಳಪ್ಪ, ಹನುಮಂತಯ್ಯ ಇತ್ಯಾದಿ ಇದ್ದರು. ಬೇಲೂರು ತಾಲ್ಲೂಕಿನ ಸಾಣೆನಹಳ್ಳಿ ಮತ್ತು ಗಂಗೂರು ಅಂದು ಪ್ರಮುಖ ಹೋರಾಟದ ಕೇಂದ್ರಗಳಾಗಿದ್ದವು. ಗಂಗೂರಿನ ಮಲ್ಲೇಗೌಡ, ಕರೀಗೌಡ, ತಿಮ್ಮೆಗೌಡ, ಹುಲಿಗೌಡ ಮುಂತಾದವರಿಗೆ ಲಾಠಿ ಏಟು ಬಿದ್ದು ಅಂದೇ ಅಸುನೀಗಿದರು. ಇಂತಹ ಘಟನೆಗಳು ಹಾಸನ, ಬೇಲೂರು, ಅರಸೀಕೆರೆ ತಾಲ್ಲೂಕುಗಳಲ್ಲಿ ಸರ್ವೆ ಸಾಮಾನ್ಯವಾಗಿದ್ದವು. ಅಂದಿನ ಘಟನೆಗಳು ಮತ್ತು ಅಂದಿನ ನಾಯಕರುಗಳು ಈ ಪ್ರದೇಶದ ಜನರಿಗೆ ರಾಜಕೀಯ ಶಿಕ್ಷಣವನ್ನು ನೀಡಿ ಅವರನ್ನು ಸ್ವಾತಂತ್ರ್ಯ ಚಳವಳಿಯಲ್ಲಿ ಮುಖ್ಯವಾಹಿನಿಗೆ ತಂದು ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಸ್ವತಂತ್ರ ಹೋರಾಟದಲ್ಲಿ ದಿಟ್ಟ ಹೆಜ್ಜೆಗಳನ್ನು ಇರಿಸುವುದರಲ್ಲಿ ಯಶಸ್ವಿಯಾಗಿದ್ದರು.

ರಾಷ್ಟ್ರೀಯವಾದಿ, ತೀವ್ರವಾದಿ ವಿದ್ಯಾರ್ಥಿಗಳ ಗುಂಪು ತೀವ್ರ ಚರ್ಚೆ, ವಾದ ವಿವಾದ ನಡೆದು ರಾಷ್ಟ್ರೀಯ ಮನೋಭಾವ ಹೊಂದಿದ್ದ ಹಾಸ್ಟೆಲ್‌ನ ವಿದ್ಯಾರ್ಥಿಗಳು ಹಾರನಹಳ್ಳಿ ರಾಮಸ್ವಾಮಿಯವರ ನಾಯಕತ್ವದಲ್ಲಿ ಹೊರಬಂದರು. ಅದೇ ರಾತ್ರಿ ಹಾಸ್ಟೇಲ್‌ನಿಂದ ಹೊರಬಂದು ದೊಡ್ಡಣ್ಣಹಾಲ್‌ನ ಮೈದಾನದಲ್ಲಿ ಸಭೆ ಸೇರಿ ಕರ್ನಾಟಕ ಪ್ರಾಂತ್ಯ ವಿದ್ಯಾರ್ಥಿ ಕಾಂಗ್ರೆಸ್ ಸ್ಥಾಪಿಸಲಾಯಿತು. ಈ ಕಾರ್ಯದಲ್ಲಿ ಅರಸೀಕೆರೆ ಮೂಲದ ಹಾರನಹಳ್ಳಿ ರಾಮಸ್ವಾಮಿ ಹಾಗೂ ಅವರ ಸ್ನೇಹಿತರಾದ ಸೋಗು ನಾಗಭೂಷಣ, ವಿ.ಎಸ್. ಕೃಷ್ಣ ಅಯ್ಯರ್, ವಿ. ಅಣ್ಣಯ್ಯ ಸೇರಿದಂತೆ ಐದುನೂರು ವಿದ್ಯಾರ್ಥಿಗಳ ಗುಂಪು ಇತ್ತು. ಹೀಗೆ ಇದು ವಿದ್ಯಾರ್ಥಿ ಕಾಂಗ್ರೆಸ್ ಸ್ಥಾಪನೆಯ ಹಿನ್ನೆಲೆಯಾಗಿತ್ತು. ಹೀಗೆ ಸ್ಥಾಪನೆಯಾದ ವಿದ್ಯಾರ್ಥಿ ಕಾಂಗ್ರೆಸ್‌ನ ಸಂಘಟನೆಗೆ ವಿ. ಎಸ್. ಕೃಷ್ಣ ಅಯ್ಯರ್ ಅಧ್ಯಕ್ಷರಾಗಿದ್ದರೆ, ರಾಮಸ್ವಾಮಿಯವರು ಪ್ರಧಾನ ಕಾರ್ಯದರ್ಶಿಯಾಗಿದ್ದರು. ನಂತರ ಈ ವಿದ್ಯಾರ್ಥಿ ಸಂಘಟನೆ ಹಾಗೂ ಚಳುವಳಿ ಬೃಹತ್ ರೂಪ ತಳೆದು ನಾಡಿನಾದ್ಯಂತ ಚುರುಕಾಗಿ ಕಾರ್ಯಕ್ರಮಗಳನ್ನು ನಡೆಸಲಾರಂಭಿಸಿತು. ೧೯೪೪ರಲ್ಲಿ ಬೆಂಗಳೂರಿನಲ್ಲಿ ಪ್ರಥಮ ಪ್ರಾಂತ್ಯ ಮಟ್ಟದ ವಿದ್ಯಾರ್ಥಿ ಕಾಂಗ್ರೆಸ್ ಮಹಾಸಭೆಯನ್ನು ರಾಮಸ್ವಾಮಿ ಮತ್ತು ಅವರ ಸ್ನೇಹಿತರು ಸಂಘಟಿಸಿದ್ದರು. ಈ ಸಭೆಯ ಅಧ್ಯಕ್ಷತೆಯನ್ನು ಸಿದ್ಧವನಹಳ್ಳಿ ಕೃಷ್ಣಶರ್ಮ ವಹಿಸಿದ್ದರು. ಇದರ ಉದ್ಘಾಟನೆಯನ್ನು ಆಂಧ್ರ ಪ್ರದೇಶದ ಕಾಂಗ್ರೆಸ್ ನಾಯಕ ಎನ್. ಜಿ. ರಂಗ ನೆರವೇರಿಸಿದ್ದರು. ಈ ರೀತಿ ರಾಮಸ್ವಾಮಿ ಹಾಗೂ ಅವರ ಸ್ನೇಹಿತರು ಸಂಘಟಿಸಿದ ಪ್ರಾಂತ್ಯ ಮಟ್ಟದ ವಿದ್ಯಾರ್ಥಿ ಕಾಂಗ್ರೆಸ್ ಮಹಾಸಭೆಯ ಯಶಸ್ಸು ಮೈಸೂರು ಸಂಸ್ಥಾನ ಕಾಂಗ್ರೆಸ್‌ನ ಮುಖಾಂತರ ಗಮನ ಸೆಳೆಯಿತು. ಅಲ್ಲದೆ ನಾಡಿನ ವಿದ್ಯಾರ್ಥಿಗಳಲ್ಲಿ, ವಿದ್ಯಾರ್ಥಿ ಸಂಘಟನೆಗಳಲ್ಲಿ ಮಿಂಚಿನ ಸಂಚಾರ ಉಂಟುಮಾಡಿತು. ಮೊದಲ ಸಭೆಯ ಯಶಸ್ವಿನಿಂದ ಹಾಗೂ ವಿದ್ಯಾರ್ಥಿಗಳ, ಮುಖಂಡರುಗಳ ಬೆಂಬಲದಿಂದ ಉತ್ತೇಜಿತಗೊಂಡ ರಾಮಸ್ವಾಮಿಯವರು, ೧೯೪೫, ೧೯೪೬ರಲ್ಲಿ ಶಿವಮೊಗ್ಗ, ಧಾರವಾಡಗಳಲ್ಲಿ ಪ್ರಾಂತೀಯ ಮಟ್ಟದ ವಿದ್ಯಾರ್ಥಿ ಕಾಂಗ್ರೆಸ್ ಮಹಾಸಭೆ ನಡೆಸಿ ರಾಷ್ಟ್ರಮಟ್ಟದ ಕಾಂಗ್ರೆಸ್ ನಾಯಕರ ಗಮನ ಸೆಳೆದರು.

೧೯೪೩–೪೪ರಲ್ಲಿ ಕಮ್ಯೂನಿಸ್ಟರ ಕೈಗೊಂಬೆಯಾಗಿದ್ದ, ರಾಜ್ಯ ವಿದ್ಯಾರ್ಥಿ ಫೆಡರೆಷನ್ ಭಿನ್ನವಾಗಿ ಮಾಡಿ ಮೈಸೂರು ಸಂಸ್ಥಾನದ 'ವಿದ್ಯಾರ್ಥಿ ಕಾಂಗ್ರೆಸ್ ಪರಿಷತ್' ಸ್ಥಾಪಿಸಿದರು. ಈ ಕಾರ್ಯದಲ್ಲಿ ವಿ. ಎಸ್. ಕೃಷ್ಣ ಅಯ್ಯರ್, ಮೈಸೂರು ಶ್ರೀಕಂಠಪ್ಪ, ಸೊಗಲ್ ನಾಗಭೂಷಣ ಮುಂತಾದ ನಾಯಕರನ್ನು ಬೆಂಬಲಿಸಿದ್ದರಿಂದ ಹಾರನಹಳ್ಳಿ ರಾಮಸ್ವಾಮಿಯವರನ್ನು ಅಧ್ಯಕ್ಷರನ್ನಾಗಿ, ಸೊಗಲ್ ನಾಗಭೂಷಣ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿದರು. ಮೈಸೂರು ವಿದ್ಯಾರ್ಥಿ ಕಾಂಗ್ರೆಸ್‌ಗೆ ಸ್ಪಷ್ಟರೂಪ ಕೊಟ್ಟು ೧೯೪೫ರಲ್ಲಿ ಧಾರವಾಢದಲ್ಲಿ, ೧೯೪೬ ಶಿವಮೊಗ್ಗದಲ್ಲಿ ಸಮ್ಮೇಳನ ನಡೆಸಿದರು. ಇವರ ಜೊತೆಗಿದ್ದ ಪ್ರಮುಖ ಮುಖಂಡರೆಂದರೆ ಬೆಳಗಾವಿಯ ವಿ.ಎ. ಕುಲಕರ್ಣಿ, ಹೆಚ್.ಆರ್. ಕುಲಕರ್ಣಿ, ಶಂಕರ್ ಡಾಂಗಿ, ಕಾರಾವಾರದ ಎಸ್.ಕೆ.ಪೈ, ಧಾರವಾಡದ ಶಂಕರ್ ಕುರ್ತುಕೂಟಿ, ಶಿವಮೊಗ್ಗದ ಜಿ.ಎಂ.ಜವಳಿ, ಹೊಳೇನರಸೀಪುರದ ಜಿ.ಟಿ. ಕೃಷ್ಣರಾವ್, ನಾಡಿಗ ಕೃಷ್ಣಮೂರ್ತಿ, ಕೆ.ಟಿ. ವಸಂತಯ್ಯ, ಮುಂತಾದವರೊಡನೆ ಹಾಸನ ಜಿಲ್ಲೆಯಾದ್ಯಂತ ಬಿರುಗಾಳಿಯಂತೆ ಪ್ರವಾಸ ಮಾಡಿ ವಿದ್ಯಾರ್ಥಿಗಳ ಮನಸ್ಸಿಗೆ ಮಿಂಚಿನ ಸಂಚಾರ ಮಾಡಿಸಿ ವಿದ್ಯಾರ್ಥಿಗಳನ್ನು ದೇಶಪ್ರೇಮಿಗಳಾಗಿ ರೂಪಿಸಿದರು.

೧೯೨೩ರಲ್ಲಿ ಡಾ. ಎನ್.ಎಸ್. ಹರ್ಡೀಕರ್ ಧಾರವಾಡದಲ್ಲಿ 'ಹಿಂದೂಸ್ಥಾನಿ ಸೇವಾದಳ' ಎಂಬ ಸಂಘ ಸ್ಥಾಪಿಸಿದ್ದು, ಇದು ಒಂದು ಸ್ವಯಂಸೇವಕರ ಸಂಘವಾಗಿತ್ತು. ಹಿಂದೂಸ್ಥಾನಿ ಸೇವಾದಳವು ಅಖಿಲ ಭಾರತ ಸಂಘಟನೆಯಾಗಿದ್ದು ಅದರ ಪ್ರಧಾನ ಕೇಂದ್ರ ಹುಬ್ಬಳ್ಳಿಯಲ್ಲಿತ್ತು. ಮುಂದೆ ಇದನ್ನು ೧೯೩೧ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸಿನೊಂದಿಗೆ ವಿಲೀನಗೊಳಿಸಿತು. ಆದ್ದರಿಂದ ಇದಕ್ಕೆ ಕಾಂಗ್ರೆಸ್ ಸೇವಾದಳ ಎಂಬ ಹೆಸರು ಬಂದಿತು. ಗಾಂಧೀಜಿ ಪ್ರಭಾವದಿಂದ ಚಳುವಳಿಗೆ ಧುಮುಕಿದ ಹರ್ಡೀಕರ್ ಮಂಜಪ್ಪ 'ಕರ್ನಾಟಕದ ಗಾಂಧಿ' ಎಂದು ಪ್ರಸಿದ್ಧಿಯಾಗಿದ್ದರು. ಖಾದಿಯನ್ನು ಜನಪ್ರಿಯ ಮಾಡಲು ಗಂಗಾಧರ್ ದೇಶಪಾಂಡೆ 'ಚರಕ ಸಂಘ' ಸ್ಥಾಪಿಸಿದರು. ಹೀಗೆ ಕರ್ನಾಟಕ ಗಾಂಧಿ ಮತ್ತು ಕರ್ನಾಟಕ ಕೇಸರಿಯು ಉತ್ತರ ಕರ್ನಾಟಕದಲ್ಲಿ ಕಾಂಗ್ರೆಸ್ ಹೆಬ್ಬುಲಿಗಳ ಅಡಗು ತಾಣದಿಂದ ಆರ್ಭಟಿಸುತ್ತಿದ್ದರು. ಡಾ. ಎನ್.ಎಸ್. ಹರ್ಡೀಕರ್ ಆ ಹೆಬ್ಬುಲಿಗಳ ಮೇಲೆ ಹಿಂದೂಸ್ಥಾನ ಸೇವಾದಳವನ್ನು ಕಟ್ಟಿ ಕರ್ನಾಟಕದ ಸ್ವಾತಂತ್ರ್ಯ ಚಳುವಳಿಗೆ ಹೊಸ ಸ್ವರೂಪವನ್ನು ನೀಡಿದರು. ಅಖಿಲ ಭಾರತ ಸೇವಾದಳದ ಮುಖ್ಯಸ್ಥನಾಗಿದ್ದ ಡಾ. ಎನ್.ಎಸ್. ಹರ್ಡೀಕರ್‌ರವರ ಶಿಷ್ಯರಾಗಿ ರಾಮಸ್ವಾಮಿಯವರು ೧೯೪೭ರಲ್ಲಿ ಅಖಿಲ ಭಾರತ್ ಸೇವಾದಳದ ಜೆ.ಓ.ಸಿಗಳ ತಿಂಗಳ ಶಿಬಿರ ದೆಹಲಿಯಲ್ಲಿ ನಡೆಯಿತು. ಹೀಗೆ ಈ ಶಿಬಿರವು ಹಿಂದೂಸ್ಥಾನ ಸೇವಾದಳದಿಂದ ಕರ್ನಾಟಕವನ್ನು ಪ್ರತಿನಿಧಿಸಿದ ರಾಮಸ್ವಾಮಿ ದೆಹಲಿಯಲ್ಲಿ ಮಹಾರಾಷ್ಟ್ರ ಕಾಂಗ್ರೆಸ್ ಹಿರಿಯರು ಋಷಿ ಜೀವನ ನಡೆಸುತ್ತಿದ್ದ

ಶಂಕರದೇವ ಅವರ ಮನೆಯಲ್ಲಿ ಇವರ ವಾಸ್ತವ್ಯವಿತ್ತು. ಶಿಬಿರ ನಡೆಯುತ್ತಿರುವ ಸಂದರ್ಭದಲ್ಲಿ ಹಿಂದುಸ್ಥಾನಿ ಸೇವಾದಳದ ಪಿತಾಮಹರಾದ ಹರ್ಡೀಕರ್ ಈ ವೀರ ಅಭಿಮನ್ಯುವನ್ನು ಮಹಾತ್ಮರಿಗೆ ಪರಿಚಯಿಸಿದರು. ಬಿರ್ಲಾ ಹೌಸ್ ಪಕ್ಕದ ಸಣ್ಣ ಮನೆಯಲ್ಲಿದ್ದ ಬಾಪು ಪ್ರಾರ್ಥನಾ ಸಭೆಗಾಗಿ ಹೊರಬಂದಾಗ ಡಾ.ಹರ್ಡೀಕರ್‌ರವರು ಮಹಾತ್ಮರಿಗೆ ವಿನಮ್ರ ಪೂರ್ವಕವಾಗಿ ನಮಸ್ಕಾರ ಮಾಡಿ 'ನೋಡಿ ಬಾಪು ನಮ್ಮ ಕರ್ನಾಟಕ ಸೇವಾದಳದ ನಾಯಕ ಬಂದಿದ್ದಾರೆ' ಎಂದು ರಾಮಸ್ವಾಮಿಯವರನ್ನು ಪರಿಚಯಿಸಿದರು. ಬಾಪೂಜಿ ನಗು ನಗುತ್ತಾ ರಾಮಸ್ವಾಮಿಯವರ ಹೆಗಲ ಮೇಲೆ ಕೈಇಟ್ಟು "ನೋಡಪ್ಪ ನೀನೆ ಪರವಾಗಿಲ್ಲ ದಂಡನಾಯಕನಾಗಿದೀಯಾ ನಾನಿನ್ನೂ ಸ್ವಯಂ ಸೇವಕನಾಗಿದ್ದೇನೆ" ಎಂದು ನಗುತ್ತ ಹೇಳಿದಾಗ ರಾಮಸ್ವಾಮಿಯವರಿಗೆ ಏನು ಹೇಳಲು ತೋರಲಿಲ್ಲ. ಬಾಯಿಯಲ್ಲಿ ಪದಗಳೇ ಹೊರಡದಂತೆ ಆಯ್ತು. ಮಹಾತ್ಮರು ಆತ್ಮೀಯತೆಯಿಂದ ಹಾರನಹಳ್ಳಿಯವರ ಹೆಗಲ ಮೇಲೆ ಕೈ ಇಟ್ಟಾಗ ಅವರಿಗೇನೋ? ರೊಮಾಂಚನವಾದ ಅನುಭವ. ಇಡೀ ಶರೀರದಲ್ಲಿ ರಕ್ತದ ಕಣ ಕಣದಲ್ಲಿ ಮಿಂಚಿನ ಸಂಚಲನ ಉಂಟಾದ ಅನುಭವವಾಯಿತು. ಬಹಳ ದೊಡ್ಡ ವ್ಯಕ್ತಿತ್ವದ ಗಾಂಧೀಜೀ ಮುಂದೆ ಹೆಮ್ಮೆಯಿಂದ ಎದೆ ಉಬ್ಬಿಸಿ ನಿಂತಿದ್ದ ಹಾರನಹಳ್ಳಿಯವರಿಗೆ ರಾಷ್ಟ್ರಪಿತನ ಆ ಮಾತುಗಳು ಅವರ ಅಹಮನ್ನು ಇಳಿಸಿ ನಮ್ರತಾ ಭಾವವನ್ನು ಇಲ್ಲಿಯವರೆಗೂ ಉಳಿಸಿತು. ಇವರು ಅರಸೀಕೆರೆಗೆ ವಾಪಸ್ಸು ಬಂದಾಗ ಅರಸೀಕೆರೆ, ಕಡೂರು, ತಿಪಟೂರಿನ ಹೋರಾಟಗಾರರಿಗೆ ಗಾಂಧೀಜಿಯವರೊಂದಿಗಿನ ಸಂವಾದವನ್ನು ತಿಳಿಸಿ ಸ್ವಾತಂತ್ರ ಹೋರಾಟಕ್ಕೆ ಜನರನ್ನು ಪ್ರೇರೇಪಿಸುತ್ತಿದ್ದರು. ಗಾಂಧೀಜಿಯವರೊಡನೆ ಭೇಟಿಯ ಅವಕಾಶ ದೊರೆತ ಆ ನೆನಪು ಸದಾ ಹಸಿರಾಗಿಯೇ ಉಳಿಯಿತು. ಆ ಶಿಬಿರವನ್ನು ಮುಗಿಸಿ ವಾಪಸ್ಸು ಕರ್ನಾಟಕಕ್ಕೆ ಬಂದಾಗ ಶ್ರೀ ರಂಗ ಕಾಮತರು, ಎಸ್.ಎಸ್. ಕುಲಕರ್ಣಿ, ಜಯದೇವ ಕುಲಕರ್ಣಿ, ಅಣ್ಣಾ ಗುರೂಜಿ, ಆರ್. ಕುಲಕರ್ಣಿ, ವೆಂಕಟೇಶ್ ಕರಗುಪ್ಪೆ, ಅರವಿಂದ ಜೋಷಿ, ಯಾವಗಲ್ ಹೀಗೆ ಹಲವರ ಸಂಪರ್ಕ ಉಂಟಾಯಿತು. ಇವರ ಪ್ರೇರಣೆಯಿಂದ ವಿದ್ಯಾರ್ಥಿಗಳು, ಅಷ್ಟೆ ಅಲ್ಲದೆ, ವಿದ್ಯಾರ್ಥಿನಿಯರು, ಸೇವಾದಳಕ್ಕೂ ಸೇರಿಕೊಂಡಿದ್ದರು. ಹೀಗೆ ರಾಮಸ್ವಾಮಿಯವರು ಕರ್ನಾಟಕ ಸೇವಾದಳದ ದಂಡನಾಯಕರಾಗಿ, ವಿದ್ಯಾರ್ಥಿ ಸಮೂಹದ ಮುಖಂಡರಾಗಿ ರಾಷ್ಟ್ರೀಯ ಚಳವಳಿಯಲ್ಲಿ ಇವರು ಸಲ್ಲಿಸಿರುವ ಸೇವೆ ಅನನ್ಯ.



ಅರಸೀಕೆರೆ ಮತ್ತು ಸುತ್ತಮುತ್ತಲಿನ ಪ್ರದೇಶದ ಜನತೆ ಸ್ವಾತಂತ್ರ್ಯ ಹೋರಟದ ಜೊತೆಗೆ ಸ್ವಾತಂತ್ರದ ನಂತರ ಐತಿಹಾಸಿಕ ಅರಮನೆ ಸತ್ಯಾಗ್ರಹದಲ್ಲಿ ತೊಡಗಿಸಿಕೊಂಡರು. ೧೯೪೭ರ ಆಗಸ್ಟ್ ೧೫ರಂದು ಭಾರತ ಬ್ರಿಟಿಷರ ಅಧೀನದಿಂದ ಸ್ವಾತಂತ್ರ್ಯ ಪಡೆದರೂ ದೇಶೀಯ ಸಂಸ್ಥಾನಗಳ ಆಡಳಿತ ವಿಧಾನದಲ್ಲಿ ಯಾವುದೇ ರೀತಿಯ ಬದಲಾವಣೆಯಾಗಲಿಲ್ಲ. ಅವುಗಳಲ್ಲಿ ರಾಜ ಮಹಾರಾಜರ ಆಳ್ವಿಕೆಯೇ ಮುಂದುವರಿಯಿತು. ಈ ದೆಸೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ಒಡೆಯರ ಆಳ್ವಿಕೆಯನ್ನು ಕೊನೆಗೊಳಿಸುವ ಉದ್ದೇಶದಿಂದ ಸತ್ಯಾಗ್ರಹ ಚಳವಳಿ ಆರಂಭವಾಯಿತು. ಈ ದೆಸೆಯಲ್ಲಿ ಮೈಸೂರು ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ಮೈಸೂರಿಗೆ ತೆರಳಿ ಮಹಾರಾಜರ ಮೇಲೆ ಒತ್ತಡ ಹೇರಲು ಅರಮನೆಯ ಮುಂಭಾಗದಲ್ಲಿ ಸತ್ಯಾಗ್ರಹ ನಡೆಸಲು ನಿರ್ಧರಿಸಲಾಯಿತು. ಆದುದರಿಂದ ಇದಕ್ಕೆ 'ಜವಾಬ್ದಾರಿ ಸರ್ಕಾರ ರಚನೆಗಾಗಿ ನಡೆದ ಚಳವಳಿ' ಅಥವಾ 'ಮೈಸೂರು ಚಲೋ ಚಳವಳಿ' ಅಥವಾ 'ಅರಮನೆ ಸತ್ಯಾಗ್ರಹ' ಎಂದು ಹೆಸರು. ಕಾಂಗ್ರೆಸ್ ನಾಯಕರು ಸೆಪ್ಟೆಂಬರ್ ೪ ರಂದು 'ಮೈಸೂರು ಚಲೋ' ಚಳವಳಿ ನಡೆಸಲು ಸಿದ್ಧತೆಯನ್ನಾರಂಭಿಸಿದರು. ಆದರೆ ಸೆಪ್ಟೆಂಬರ್ ೩ ರ ಮಧ್ಯರಾತ್ರಿಯೇ ಸರ್ಕಾರ ಎಲ್ಲಾ ಕಾಂಗ್ರೆಸ್ ನಾಯಕರನ್ನು ಬಂಧಿಸಿತು. ಅವರುಗಳೆಂದರೆ ಕೆ.ಸಿ.ರೆಡ್ಡಿ, ಸುಬ್ರಹ್ಮಣ್ಯಂ, ಎಂ.ಹುಚ್ಚೇಗೌಡ, ಎಚ್.ಕೆ. ವೀರಣ್ಣಗೌಡ, ಕೆ.ಟಿ. ಭಾಷ್ಯಂ, ಎ.ಜಿ. ಬಂಧೀಗೌಡ, ಎಸ್. ನಿಜಲಿಂಗಪ್ಪ ಮೊದಲಾದವರು. ಇದೇ ರೀತಿ ರಾಜ್ಯದ ಎಲ್ಲಾ ಭಾಗಗಳಲ್ಲೂ ಪ್ರಮುಖ ನಾಯಕರನ್ನು ಬಂಧಿಸಲಾಯಿತು. ಪತ್ರಿಕೆಗಳ ಮೇಲೆ ನಿರ್ಬಂಧ ಹಾಕಲಾಯಿತು. ಸಭೆ, ಸಮಾರಂಭಗಳನ್ನು ನಿಷೇಧಿಸಲಾಯಿತು. ಎಲ್ಲಾ ಕಡೆ ಸೈನ್ಯ ಮತ್ತು ಪೊಲೀಸರನ್ನು ಜಮಾವಣೆ ಮಾಡಲಾಯಿತು. ಬ್ರಿಟಿಷ್ ಸರ್ಕಾರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಮಾಡಿದ್ದಂತೆ ಇಲ್ಲೂ ಮಾಡಲಾಯಿತು.

ಕಾಂಗ್ರೆಸ್ ನಾಯಕರ ಬಂಧನದ ಸುದ್ದಿ ತಿಳಿಯುತ್ತಿದ್ದಂತೆಯೇ ವಿದ್ಯಾರ್ಥಿಗಳು ಮತ್ತು ಕಾರ್ಮಿಕರು ರೊಚ್ಚಿಗೆದ್ದು ಹಿಂಸಾಕೃತ್ಯದಲ್ಲಿ ತೊಡಗಿದರು. ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಉದ್ರಿಕ್ತಗೊಂಡ ಕಾರ್ಯಕರ್ತರು, ವಿದ್ಯಾರ್ಥಿಗಳು, ಕಾರ್ಮಿಕರು ಟೆಲಿಫೋನ್ ತಂತಿಗಳನ್ನು ಕಡಿದು ಹಾಕಿದರು.ರೈಲು ಕಂಬಿಗಳನ್ನು ಕಿತ್ತು ಹಾಕಿದರು. ಸೇತುವೆಗಳನ್ನು ಜಖಂಗೊಳಿಸಿದರು. ಪೊಲೀಸ್ ಠಾಣೆಗಳು, ಸರ್ಕಾರಿ ಕಛೇರಿಗಳು ಹಾಗೂ ಮದ್ಯದಂಗಡಿಗಳ ಮುಂದೆ ಪಿಕೇಟಿಂಗ್ ನಡೆಸಿದರು.ಪರಿಸ್ಥಿತಿಯನ್ನು ಹತೋಟಿಗೆ

ತರಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು. ಗುಂಪು ಚದುರಿಸಲು ಗುಂಡು ಹಾರಿಸಿದರು. ಪರಿಣಾಮವಾಗಿ ಹಲವು ಮಂದಿ ಗುಂಡೇಟಿಗೆ ಬಲಿಯಾದರೆ, ನೂರಾರು ಮಂದಿ ಗಾಯಗೊಂಡರು. ಪರಿಸ್ಥಿತಿ ಮತ್ತಷ್ಟು ವಿಕೋಪಕ್ಕೆ ತಿರುಗಿತು. ಜನತೆ ಸರ್ಕಾರದ ದಮನಕಾರಿ ನೀತಿಯನ್ನು ಖಂಡಿಸಿತು. ಪ್ರತಿಭಟನಾ ಚಳವಳಿ ತಾಲ್ಲೂಕು, ಹೋಬಳಿಗಳಿಗೂ ಹಬ್ಬಿತು. ಮೈಸೂರಿನಲ್ಲಿ ಸೆಪ್ಟೆಂಬರ್ ೫ ರಂದು ಮಹಾರಾಜ ಕಾಲೇಜಿನ ಎದುರು ನ್ಯಾಯಾಧೀಶರ ನಿಷೇಧಾಜ್ಞೆಯನ್ನು ವಿರೋಧಿಸಿ ಒಂದು ಸಭೆ ನಡೆಯಿತು. ಅಲ್ಲಿಗೆ ಪೊಲೀಸರು ಹಾಜರಾದರು. ನೂರಡಿ ರಸ್ತೆಯ ಐದು ದೀಪಗಳ ವೃತ್ತದ ಬಳಿ ಜಮಾಯಿಸಿದ ವಿದ್ಯಾರ್ಥಿಗಳು ಪೊಲೀಸರ ಮೇಲೆ ಕಲ್ಲು, ಇಟ್ಟಿಗೆ ತೂರಲಾರಂಭಿಸಿದರು. ಮೊದಲೇ ಕೋಪದಿಂದ ಕುದಿಯುತ್ತಿದ್ದ ಪೊಲೀಸರು ಮತ್ತು ಸೈನಿಕರು ವಿದ್ಯಾರ್ಥಿ ಗುಂಪಿನ ಮೇಲೆ ಗುಂಡಿನ ಮಳೆಗರೆದರು. ಪರಿಣಾಮವಾಗಿ ಹಾರ್ಡ್‌ವಿಕ್ ಹೈಸ್ಕೂಲ್ ವಿದ್ಯಾರ್ಥಿ ರಾಮಸ್ವಾಮಿ ಎಂಬುವನು ಗುಂಡಿಗೆ ಬಲಿಯಾದನು. ಮುಂದೆ ಅವನ ಸ್ಮರಣಾರ್ಥ ಆ ವೃತ್ತಕ್ಕೆ 'ರಾಮಸ್ವಾಮಿ ಸರ್ಕಲ್' ಎಂದು ನಾಮಕರಣ ಮಾಡಲಾಯಿತು. ನೂರಾರು ವಿದ್ಯಾರ್ಥಿಗಳು ಗಾಯಗೊಂಡರು. ಸತ್ಯಾಗ್ರಹಿಗಳು ಸೆಪ್ಟೆಂಬರ್ ೧೪ ರಂದು ಅರಮನೆಯ ಮುಂಭಾಗದಲ್ಲಿ ಬೃಹತ್ ಸತ್ಯಾಗ್ರಹ ನಡೆಸಲು ನಿರ್ಧರಿಸಿದರು. ಅದನ್ನು ನಿಷ್ಫಲಗೊಳಿಸಲು ಮೈಸೂರು ಜಿಲ್ಲಾಧಿಕಾರಿ ಸೆಪ್ಟೆಂಬರ್ ೬ ನೇ ತಾರೀಖಿನಿಂದ ಒಂದು ವಾರ ಕಾಲ ರಾಜಧಾನಿಯ ಎಲ್ಲಾ ಊಟದ ಹೋಟೆಲ್‌ಗಳನ್ನು ಮುಚ್ಚುವಂತೆ ನಿಷೇಧಾಜ್ಞೆ ಹೊರಡಿಸಿದರು. ಈ ಮಧ್ಯೆ ಸೆಪ್ಟೆಂಬರ್ ೧೪ ರಂದು ಅರಮನೆಯ ಮುಂದೆ ಬೃಹತ್ ಸತ್ಯಾಗ್ರಹ ನಡೆಸಲು ದೇಶದ ನಾನಾ ಭಾಗಗಳಿಂದ ೧೫೦೦ ಕ್ಕೂ ಹೆಚ್ಚು ಮಂದಿ ಸ್ವಯಂ ಸೇವಕರು ಮೈಸೂರಿಗೆ ಜಾಥಾಗಳಲ್ಲಿ ಹೊರಟಿರುವ ಸುದ್ದಿ ತಲುಪಿತು. ತಮಿಳುನಾಡು, ಆಂಧ್ರಗಳಿಂದಲೂ ಸಾವಿರಾರು ಜನ ಸತ್ಯಾಗ್ರಹಿಗಳು ಹೊರಟರು. ಅವರನ್ನು ತಡೆಯಲು ಗಡಿಗಳಲ್ಲಿ ಬಲವಾದ ಮಿಲಿಟರಿ ಕಾವಲು ಹಾಕಲಾಯಿತು. ಮೈಸೂರು ರಾಜ್ಯದ ೯ ವೃತ್ತಪತ್ರಿಕೆಗಳ ಮೇಲೆ ಸರ್ಕಾರ ನಿರ್ಬಂಧ ಹೇರಿತು.

೧೯೪೭ರ ಆಗಸ್ಟ್ ೧೫ ರಂದು ದೇಶ ಸ್ವಾತಂತ್ರ್ಯಗೊಂಡರೂ ಮೈಸೂರು ಸಂಸ್ಥಾನದಲ್ಲಿ ರಾಜಪ್ರಭುತ್ವ ಅಂತ್ಯವಾಗದೇ ಇದ್ದದ್ದು ಸ್ವಾತಂತ್ರ್ಯ ಪ್ರೇಮಿಗಳಿಗೆ ನಿರಾಶೆಯ ಕಾರ್ಮೋಡ ಬೆಳೆದು ನಿಂತಿತು. ಸರ್ದಾರ್ ವಲ್ಲಭಬಾಯಿ ಪಟೇಲ್ ಮೈಸೂರು ಸಂಸ್ಥಾನದ ಮಹಾರಾಜರಿಗೆ ಬೆದರಿಕೆ ಮನವಿ ನೀಡಿದರೂ



ಮೈಸೂರು ಸಂಸ್ಥಾನದ ದಿವಾನರಾಗಿದ್ದ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರ ಮಾತಿಗೆ ಮಣಿಯದ ಮಹಾರಾಜ ಜಯಚಾಮರಾಜ ಒಡೆಯರ ಮನ ಕೆಡಿಸಿ ಸ್ವಾತಂತ್ರ್ಯ ಉಳಿಸಿಕೊಳ್ಳುವಂತೆ ಕರೆನೀಡಿದರು. ಮಹಾರಾಜರು ಆರ್ಕಾಟ್‌ರ ಕೈಗೊಂಬೆಯಾಗಿ ವರ್ತಿಸುತ್ತಿದ್ದು ಕನ್ನಡಿಗರ ಹೃದಯದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯ ಕಿಚ್ಚು ಹಚ್ಚಿ ಮೈಸೂರು ಸಂಸ್ಥಾನದ ಅರಮನೆ ಸತ್ಯಾಗ್ರಹಕ್ಕೆ ಮುನ್ನುಡಿ ಬರೆಯಿತು. ಇಲ್ಲಿನ ಜನತೆ ಹಾಸನ ಜಿಲ್ಲೆಯನ್ನು ಕೇಂದ್ರವನ್ನಾಗಿಸಿ ಹಾಸನ ಜಿಲ್ಲೆಯ ತಾಲ್ಲೂಕು ಕೇಂದ್ರಗಳು, ಹೋಬಳಿ ಕೇಂದ್ರಗಳು, ನಗರ, ಪಟ್ಟಣ, ಹಳ್ಳಿ, ಗ್ರಾಮಗಳಲ್ಲಿ ಸಂಚರಿಸಿ ಮಹಾರಾಜರ ವಿರುದ್ಧ ಕ್ರಾಂತಿಕಾರಿ ಭಾಷಣ ಮಾಡಿ ಜನರ ಮನಸ್ಸಿನ ಕಿಚ್ಚನ್ನು ಕಾಳ್ಗಿಚ್ಚಿನಂತೆ ಹಬ್ಬಿಸಿದರು. ಇವರ ಜೊತೆಯಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಕೆ.ಎಂ. ರುದ್ರಪ್ಪ, ಎನ್. ಬೋರಣ್ಣಗೌಡ, ಎ.ಜಿ. ರಾಮಚಂದ್ರರಾವ್, ಸಂಪತ್ ಐಯ್ಯಂಗಾರ್, ವೈರಮುಡಿಗೌಡ, ಬೈಲಹಳ್ಳಿ ವೆಂಕಟಸುಬ್ಬು ಅಲಿಯಾಸ್ ಕಸ್ತೂರಿ ಮುಂತಾದವರು ಹಾಸನ ಜಿಲ್ಲೆಯಾದ್ಯಂತ ಪ್ರತಿಭಟನೆ ಸಭೆಗಳನ್ನು ಆಯೋಜಿಸಿದ್ದರು. ಮೆರವಣಿಗೆ, ಶಾಲಾ ಕಾಲೇಜು ಬಹಿಷ್ಕಾರ, ಅರಣ್ಯ ಸತ್ಯಾಗ್ರಹ, ಮುಂತಾದ ಹಿಂಸಾತ್ಮಕ ಕಾರ್ಯಗಳು ಹಾಸನ ಜಿಲ್ಲೆಯಾದ್ಯಾಂತ ಮಹಾರಾಜರ ವಿರುದ್ಧ ರಾರಾಜಿಸತೊಡಗಿದವು. ಅರಸೀಕೆರೆಯಿಂದ ಮೈಸೂರುವರೆಗೆ ಹಾಸನ ಜಿಲ್ಲಾ ಜನತೆ ಟಿಕೆಟ್ ಕೊಳ್ಳದೆ ರೈಲಿನಲ್ಲಿ ಪ್ರಯಾಣಿಸಿ ಟಿಕೆಟ್ ಪರೀಕ್ಷಕರಿಗೆ ಗಾಂಧಿ ಟೋಪಿಯನ್ನು ಬಲವಂತವಾಗಿ ತೊಡಿಸಿ 'ಆರ್ಕಾಟ್ ಬಾಯ್ಕಾಟ್ ತಂಬೂಚೆಟ್ಟಿ ಚಟ್ಟಿಕಟ್ಟಿ' ಎಂಬ ಘೋಷಣೆ ಕೂಗುತ್ತಾ ರೈಲಿನಲ್ಲಿ ನೂಕು ನುಗ್ಗಲಿನಿಂದ ಪ್ರಯಾಣಿಸುತ್ತಿದ್ದರು. ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನಲ್ಲಿ ಹೋರಾಟಗಾರರು ಹಗಲು, ರಾತ್ರಿ ಎನ್ನದೆ ಕಾಡು ಮೇಡು ಸುತ್ತಿ ಹಾಸನ ಜಿಲ್ಲೆಯಾದ್ಯಂತ ಸಂಚರಿಸಿ ಜವಾಬ್ದಾರಿ ಸರ್ಕಾರದ ಚಳವಳಿಯನ್ನು ತೀವ್ರಗೊಳಿಸಿದರು. ಇವರ ಮಾರ್ಗದರ್ಶನದಲ್ಲಿ ಅರಸಿಕೆರೆ ತಾಲ್ಲೂಕಿನ ಸುತ್ತ ಮುತ್ತ ರೈಲ್ವೆ ಹಳಿ ಕತ್ತರಿಸುವುದು. ಟೆಲಿಫೋನ್ ತಂತಿ ಕತ್ತರಿಸುವುದು ಮುಂತಾದ ವಿಧ್ವಂಸಕ ಕೃತ್ಯಗಳನ್ನು ಆಯೋಜಿಸಿದ್ದರು. ಭೂಗತರಾಗಿದ್ದು ಕೊಂಡೆ ಜವಾಬ್ದಾರಿ ಸರ್ಕಾರದ ದೀವಿಟಿಗೆಯನ್ನು ಹಾಸನ ಜಿಲ್ಲೆಯ ಕುಗ್ರಾಮಗಳಿಂದ ಸಾಂಸ್ಕೃತಿಕ ರಾಜಧಾನಿ ಮೈಸೂರಿನವರೆಗೆ ಕೊಂಡೊಯ್ದರು. ಆರು ತಿಂಗಳು ಕಾಲ ಸಭೆ ಮೆರವಣಿಗೆ ಹಾಸನ ಜಿಲ್ಲೆಯಾದ್ಯಂತ ನಡೆದವು. ವಿದ್ಯಾರ್ಥಿಗಳು ಶಾಲಾಕಾಲೇಜು ತ್ಯಜಿಸಿದರೆ, ವಕೀಲರು ನ್ಯಾಯಾಲಯಗಳನ್ನು, ನೌಕರರು ಕಚೇರಿಯನ್ನು ತೊರೆದು

ಬೀದಿಗಿಳಿದು ಹೋರಾಡಿದರು. ಮೈಸೂರಿನ ಹಾರ್ಡ್ವಿಕ್ ಶಾಲೆಯ ವಿದ್ಯಾರ್ಥಿ ರಾಮಸ್ವಾಮಿ ಮೂಲತಃ ಅರಸೀಕೆರೆಯವರಾಗಿದ್ದು ಅರಮನೆ ಸತ್ಯಾಗ್ರಹದ ವೇಳೆ ಪೊಲೀಸರ ಗುಂಡಿಗೆ ಬಲಿಯಾಗಿ ಪ್ರಾಣವನ್ನು ಅರ್ಪಿಸಿ ಹುತಾತ್ಮರಾದರು. ಹೋರಾಟಗಾರರನ್ನು ಸರ್ಕಾರ ಅರಸೀಕೆರೆಯಲ್ಲಿ ದಸ್ತಗಿರಿಮಾಡಿ ಎರಡು ತಿಂಗಳು ಹಾಸನದ ಜೈಲಿನಲ್ಲಿ ಇಟ್ಟರು. ಇವರು ಬಂಧಿಖಾನೆಯೊಳಗೆ ಮೈಸೂರು ಸಂಸ್ಥಾನದ ಕಾಂಗ್ರೆಸ್ ಮುಖಂಡರಾದ ತಾಳಕೆರೆ ಸುಬ್ರಹ್ಮಣ್ಯ, ಸಾಹುಕಾರ್ ಚನ್ನಯ್ಯ, ಕೆ.ಟಿ. ಭಾಷ್ಯಂ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮುಂತಾದವರೊಡನೆ ಎರಡೂವರೆ ತಿಂಗಳ ಕಾರಾಗೃಹ ಶಿಕ್ಷೆಯನ್ನು ಎರಡುವರೆ ದಿನಗಳಂತೆ ಕಳೆದು ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ರಚನೆಯಾಗಿ ನಾಡಿನ ಜನರ ಆಸೆಗಳು ಕೈಗೂಡಿ ೧೯೪೭ ಸೆಪ್ಟೆಂಬರ್ ೧೧ ರಂದು ವಿಜಯದಶಮಿಯಂದು ಕೆ.ಸಿ. ರೆಡ್ಡಿಯವರು ಮೈಸೂರು ಸಂಸ್ಥಾನದ ಪ್ರಥಮ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಬಂದರು. ೧೯೪೯ ರಲ್ಲಿ ಅರಸೀಕೆರೆಯಲ್ಲಿ ಮೈಸೂರು ಕಾಂಗ್ರೆಸ್ ಸಾರ್ವತ್ರಿಕ ಸಭೆಗಳು ಅರಮನೆ ಸತ್ಯಾಗ್ರಹದ ವಿಜಯೋತ್ಸವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಿದರು. ವಿಜಯಕ್ಕೆ ಕಾರಣಕರ್ತರಾದ ಸದಸ್ಯರನ್ನು ಸರ್ವ ಪಕ್ಷದ ಮುಖಂಡರು, ರಾಜಕೀಯ ಮುಖಂಡರು ಮುಕ್ತ ಕಂಠದಿಂದ ಶ್ಲಾಘಿಸಿದರು.

೨೦ನೇ ಶತಮಾನದಲ್ಲಿ ಕರ್ನಾಟಕದ ಜನತೆಗೆ ಸ್ವಾತಂತ್ರ್ಯ ಚಳವಳಿಯ ಜೊತೆಗೆ ಕರ್ನಾಟಕ ಏಕೀಕರಣ ಚಳವಳಿಯಲ್ಲಿ ತೊಡಗಿಸಿ ಕೊಳ್ಳುವುದು ಅನಿವಾರ್ಯವಾಗಿತ್ತು. ಆದುದರಿಂದ ಕರ್ನಾಟಕದ ಇತರ ಭಾಗದ ಜನರಂತೆ ಹಾಸನ ಮತ್ತು ಅರಸೀಕೆರೆಯ ಜನತೆ ಸ್ವಾತಂತ್ರ್ಯ ಚಳವಳಿ ಮತ್ತು ಅದರ ಜೊತೆಯಲ್ಲಿಯೆ ಸಾಗಿ ಬಂದ ಕರ್ನಾಟಕ ಏಕೀಕರಣ ಚಳವಳಿಗೆ ನೀಡಿದ ಕೊಡುಗೆಯನ್ನು ಈ ಕೆಳಕಂಡಂತೆ ಗಮನಿಸೋಣ. ಭಾರತ ಸ್ವಾತಂತ್ರ್ಯ ಚಳವಳಿ ಮತ್ತು ಕರ್ನಾಟಕ ಏಕೀಕರಣ ಇವು ಈ ಶತಮಾನದ ಕನ್ನಡಿಗರ ಜೀವನದಲ್ಲಿ ಸಂಭವಿಸಿದ ಎರಡು ಮಹತ್ವದ ಸಂದರ್ಭಗಳು. ೧೭೯೯ರ ಟಿಪ್ಪುವಿನ ಮರಣಾನಂತರ ಮೈಸೂರು ರಾಜ್ಯವು ಛಿದ್ರಛಿದ್ರಗೊಂಡು ಹರಿದು ಹಂಚಿ ಹೋಯಿತು. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಕನ್ನಡ ಮಾತನಾಡುವ ಪ್ರದೇಶಗಳನ್ನೆಲ್ಲಾ ಹರಿದು ಹಂಚಿ ಬೊಂಬಾಯಿ ಪ್ರಾಂತ್ಯ, ಮದ್ರಾಸ್ ಪ್ರಾಂತ್ಯ, ಹೈದರಾಬಾದ್ ಸಂಸ್ಥಾನ ಮೊದಲಾದ ವಿಭಿನ್ನ ಭಾಷೆ ಮಾತನಾಡುವ ರಾಜ್ಯಗಳಲ್ಲಿ ಸೇರ್ಪಡೆಗೊಳಿಸಲಾಯಿತು. ದಕ್ಷಿಣ ಕರ್ನಾಟಕದ ೯ ಜಿಲ್ಲೆಗಳಿಂದ ಕೂಡಿದ ಪ್ರದೇಶವನ್ನು ಮಾತ್ರ ಮೈಸೂರು ಒಡೆತನಕ್ಕೆ ಬಿಟ್ಟುಕೊಡಲಾಯಿತು. ಇದೇ ಅತ್ಯಂತ ದೊಡ್ಡ ಕನ್ನಡ ಪ್ರದೇಶವಾಗಿತ್ತು. ಕನ್ನಡ ಮಾತನಾಡುವ ಜನರಲ್ಲಿ ೨೦ ಆಡಳಿತ ಘಟಕಗಳಲ್ಲಿ ಹರಿದು ಹಂಚಿ ಹೋಗಿದ್ದರೂ ಅಂತಹ ಪ್ರಾಂತ್ಯಗಳನ್ನು ಒಂದುಗೂಡಿಸಲು ಅನೇಕ ಮಹನೀಯರು, ಕನ್ನಡ ಪ್ರೇಮಿಗಳು, ತಮ್ಮ ತನು ಮನ ಧನಗಳನ್ನು ಅರ್ಪಿಸಿ ದೇಶಪ್ರೇಮವನ್ನು ಮೆರೆದಿರುವ ಸಾಹಸ ಗಾಥೆಯು ಕಥೆ ರೊಮಾಂಚನಕಾರಿಯಾಗಿದೆ. ಅಂತಹ ಹೋರಾಟಗಾರರಲ್ಲಿ ಶ್ರೀಯುತ ಹಾರನಹಳ್ಳಿಯವರ ಪಾತ್ರ ಅನನ್ಯ.



ಕರ್ನಾಟಕ ಏಕೀಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಬಗ್ಗೆ ಸ್ಫೂರ್ತಿ ತುಂಬಿದ ಜನನಾಯಕರಲ್ಲಿ ಹಲವರನ್ನು ಹೆಸರಿಸಬಹುದು. ರಾಮಸ್ವಾಮಿಯವರು ಬೆಳಗಾವಿಯಲ್ಲಿದ್ದಾಗ ಕನ್ನಡ ಯುವಕರಲ್ಲಿ ಕನ್ನಡದ ಬಗ್ಗೆ ಅಭಿಮಾನ ತುಂಬಿದವರು ಮುದವೀಡು ಕೃಷ್ಣರಾಯರು, ಆಲೂರು ವೆಂಕಟರಾಯರು, ಬೇಂದ್ರೆಯವರು ಅದಕ್ಕೆ ಮೊದಲು ಬಿ.ಎಸ್ಸಿ ಮಾಡುವಾಗ ಕನ್ನಡಾಭಿಮಾನವನ್ನು ಮೂಡಿಸಿದ್ದವರು ಪುಟ್ಟಪ್ಪನವರು, ಜೊತೆಗೆ ಮೊದಲಿನಿಂದಲೂ ಅವರಿಗೆ ಗಾಂಧೀಜಿಯವರ 'ಸ್ವತಂತ್ರ ಭಾರತ' ಎಂಬ ಮಾತು ವೇದಮಂತ್ರವಾಗಿತ್ತು. ಅದರೊಂದಿಗೆ ಸ್ವಾಯತ್ತ ಕರ್ನಾಟಕವೆಂಬುದೂ ಅವರೆಲ್ಲರ ಗುರಿಯಾಗಿತ್ತು. ಕನ್ನಡ ನಾಡು ಒಂದಾಗಬೇಕೆಂಬುದರಲ್ಲಿ ಎಲ್ಲರ ಒಮ್ಮತವಿತ್ತು.ಅದರ ಬಗ್ಗೆ ಎಲ್ಲರೂ ಸೇರಿ ಕರ್ನಾಟಕದಲ್ಲಿ ಒಂದು ದೊಡ್ಡ ಚಳವಳಿಯನ್ನು ಪ್ರಾರಂಭಿಸಿದರು. ಜೆ.ವಿ.ಪಿ ಸಮಿತಿಯ ವರದಿಯನ್ನು ಪ್ರತಿಭಟಿಸಿ ಹಾರನಹಳ್ಳಿ ರಾಮಸ್ವಾಮಿ, ಗೊರೂರು, ಕೆ.ಎಂ.ರುದ್ರಪ್ಪ, ಹೆಚ್.ಎಸ್.ದೊರೆಸ್ವಾಮಿ, ವಿ.ಎಸ್.ಆರಾಧ್ಯ, ಮುಂತಾದವರು ಹಗಲಿರುಳು ಶ್ರಮಿಸಿ 'ಕರ್ನಾಟಕ ಯುವಕ ಪರಿಷತ್' ಸ್ಥಾಪಿಸಿದರು. ಅದರ ಪ್ರಥಮ ಅಧಿವೇಶನವನ್ನು ಜುಲೈ ೨೭–೨೮–೧೯೪೯ ರಂದು 'ಕರ್ನಾಟಕದ ಮ್ಯಾಂಚೆಸ್ಟರ್' ಎಂದೇ ಪ್ರಸಿದ್ಧಿಯಾಗಿರುವ ದಾವಣಗೆರೆಯಲ್ಲಿ 'ಕರ್ನಾಟಕ ಯುವಕ ಪರಿಷತ್' ಬೃಹತ್ ಅಧಿವೇಶನವನ್ನು ಸಂಯೋಜಿಸಿದ್ದರು.ಇಡೀ ಕರ್ನಾಟಕದಲ್ಲಿ ಯುವಕರ ಪಡೆ ತಯಾರಿಸುವುದು ಇದರ ಮುಖ್ಯ ಉದ್ದೇಶ. ಇದೇ ಈ ಒಂದು ಅಧಿವೇಶನದ ಗುರಿಯಾಗಿತ್ತು. ಈ ಅಧಿವೇಶನದಲ್ಲಿ ಭಾರತದ ಉಗ್ರ ರಾಷ್ಟ್ರೀಯ ಹೋರಾಟಗಾರ 'ಆಜಾದ್ ಹಿಂದ್ ಫೌಜ್' ಸೈನ್ಯದ ಮಹಾದಂಡನಾಯಕ ಸುಭಾಶ್‌ಚಂದ್ರಬೋಸ್‌ರ ಅಣ್ಣ ಶರತ್ ಚಂದ್ರ ಬೋಸ್‌ರನ್ನು ಆಹ್ವಾನಿಸಿದ್ದಲ್ಲದೆ. ಎಸ್. ನಿಜಲಿಂಗಪ್ಪ, ಸಿ. ಸುಬ್ರಹ್ಮಣ್ಯ, ಕೆ.ಆರ್. ಕಾರಂತ್, ಗುದ್ಲಪ್ಪ ಹಳ್ಳಿಕೇರಿ, ಖಾದ್ರಿ ಶಾಮಣ್ಣ, ಪಾಟೀಲ್

ಪುಟ್ಟಪ್ಪ, ಹೆಚ್.ಎಸ್. ದೊರೆಸ್ವಾಮಿ, ಬಿ.ಎಸ್. ದಾತರ್ ಮುಂತಾದ ನಾಯಕರು ಕರ್ನಾಟಕ ಏಕೀಕರಣ ಚಳುವಳಿಯ ಹೋರಾಟವನ್ನು ತೀವ್ರಗೊಳಿಸುವಂತೆ ಕರೆ ನೀಡಿದರು. ಆ ಕಾಲಾವಧಿಯಲ್ಲಿ ಅದರ ಕಾರ್ಯದರ್ಶಿಯಾಗಿ ಹಗಲಿರಳು ದುಡಿದು ಅಧಿವೇಶನದ ಯಶಸ್ಸಿಗೆ ಹಾರನಹಳ್ಳಿಯವರು ಕಾರಣಕರ್ತರಾಗಿದ್ದರು. ಈ ಅಧಿವೇಶನದಲ್ಲಿ ಕರ್ನಾಟಕ ರಾಜ್ಯ ಸ್ಥಾಪನೆಯ ನಿರ್ಣಯ ಸರ್ವಾನುಮತ ದಿಂದ ಅಂಗೀಕರಿಸಲ್ಪಟ್ಟಿತು. ಅದರ ಮುಂದಿನ ಅಧಿವೇಶನಗಳನ್ನು ಕಡೂರು ತಾಲ್ಲೂಕಿನ ಗಿರಿಯಪುರ ಗ್ರಾಮದಲ್ಲಿ ಸಿ.ಸುಬ್ರಹ್ಮಣ್ಯ ಅಧ್ಯಕ್ಷತೆಯಲ್ಲಿ ನಡೆಯಿತು. ಯಾವುದೇ ಕಾರ್ಯ ಕೈಗೊಂಡರೆ ಗುರಿಮುಟ್ಟುವವರೆಗೆ ಅವರದೇ ಅದ ಮಾರ್ಗದಲ್ಲಿ ನಡೆಸಿದರು. ಕರ್ನಾಟಕ ಏಕೀಕರಣದಲ್ಲಿ ಅನುಪಾಲನ ಕಾರ್ಯವನ್ನು ಯಶಸ್ವಿಯಾಗಿ ನಡೆಸಿದ್ದು ಇವರ ಹೆಗ್ಗಳಿಕೆ, ನ. ಸುಬ್ರಹ್ಮಣ್ಯಂ ಅಧ್ಯಕ್ಷತೆಯ ಕಡೂರಿನ ಗಿರಿಯಾಪುರ ಅಧಿವೇಶನದಲ್ಲಿ ಗೊರೂರು, ಜಿ.ಎಂ. ಜವಳಿ, ಕೆ.ಎಂ. ರುದ್ರಪ್ಪ, ಕೆ.ಎಂ. ನೀಲಶೇಖರ ಶೆಟ್ಟಿ, ಆರಾಧ್ಯ, ಹಾರನಹಳ್ಳಿ ರಾಮಸ್ವಾಮಿ ಒಳಗೊಂಡ ನಿಯೋಗವೊಂದನ್ನು ನೇಮಕ ಮಾಡಿ ದೆಹಲಿಗೆ ನಿಯೋಗ ಕಳಿಸುವ ನಿರ್ಣಯವನ್ನು ಕೈಗೊಂಡಿತು. ಆ ನಿರ್ಣಯದಂತೆ, ಈ ಆಯೋಗವು ೧೯೪೯ ಆಕ್ಟೋಬರ್‌ನಲ್ಲಿ ದೆಹಲಿಗೆ ಭೇಟಿ ನೀಡಿ ಪಂಡಿತ್ ಜವಹರಲಾಲ್ ನೆಹರು, ಸರ್ದಾರ್‌ವಲ್ಲಭಭಾಯಿ ಪಟೇಲ್, ಡಾ. ರಾಜೇಂದ್ರ ಪ್ರಸಾದ್‌ರನ್ನು ಭೇಟಿಯಾಗಿ ಮನವಿ ಮಾಡಿದರು. ಮನವಿ ಸ್ವೀಕರಿಸಿದ ನಾಯಕರ ಪ್ರತಿಕ್ರಿಯೆ ಭಿನ್ನ ರೀತಿಯಲ್ಲಿತ್ತು. ಮನವಿಯನ್ನು ನೀಡುವಾಗ ಪಟ್ಟಾಭಿ ಸೀತಾರಾಮಯ್ಯನವರಿಗೆ ಏಲಕ್ಕಿ ಹಾರ ನೀಡಿದಾಗ ಪಟ್ಟಾಭಿ ಸೀತಾರಾಮಯ್ಯ ನವರು “ನನಗೆ ಮನವಿ ಪತ್ರ ಏತಕ್ಕೆ, ನಾನು ಭಾಷಾವಾರು ಪ್ರಾಂತ್ಯಕ್ಕೆ ಬದ್ಧ ನೀವು ಕೊಟ್ಟಿರುವ ಏಲಕ್ಕಿ ಹಾರ ಒಂದು ವರ್ಷ ಉಪಯೋಗವಾಗುತ್ತದೆ” ಎಂದರು. ನೆಹರೂ ಮತ್ತು ಪಟೇಲರ ಉತ್ತರ ನಿರಾಸೆ ಮೂಡಿಸಿತ್ತು. ಅಂದಿನ ನೆಹರೂ ಮಂತ್ರಿ ಮಂಡಲದಲ್ಲಿ ಕೇಂದ್ರ ಮಂತ್ರಿಯಾಗಿದ್ದ ಕನ್ನಡಿಗ ಆರ್.ಆರ್. ದಿವಾಕರ್ ಅವರ ಕಾರ್ಯದರ್ಶಿ ನಾಡಿಗ್ ಕೃಷ್ಣಮೂರ್ತಿ ನೆರವಿನಿಂದ ನೆಹರೂರವರನ್ನು ಭೇಟಿಯಾದಾಗ ಅವರು ನಕಾರಾತ್ಮಕ ಉತ್ತರ ನೀಡಿದರು. ಈ ನಿಯೋಗವು ನಂತರ ಭಾರತದ ಗೃಹಮಂತ್ರಿ ಉಕ್ಕಿನ ಮನುಷ್ಯ ಸರ್ದಾರ ವಲ್ಲಭಭಾಯ್ ಪಟೇಲ್ ರವರನ್ನು ಭೇಟಿಯಾದಾಗ ಈ ನಿಯೋಗದ ಸದಸ್ಯರು ಪಟೇಲರಿಗೆ “ಆಂಧ್ರ ರಾಜ್ಯ ಸ್ಥಾಪನೆಗೆ ಒಪ್ಪಿಗೆ ನೀಡಿ ಕರ್ನಾಟಕ ವಿಷಯದಲ್ಲಿ ಮುಂದೂಡಿದ್ದು ಕನ್ನಡಿಗರ ಅಸಮಧಾನಕ್ಕೆ ದಾರಿಯಾಗಿದೆ ಎಂದೂ, ಎರಡಕ್ಕೂ



ಒಟ್ಟಿಗೆ ಒಪ್ಪಿಗೆ ಕೊಡಬೇಕೆಂದು” ಮನವಿ ಮಾಡಿದರು. ಆಗಿನ ಸಂಭಾಷಣೆ ಮಿತವು ಸೂಕ್ಷ್ಮವೂ ಆಗಿದ್ದು, ರಾಮಸ್ವಾಮಿಯವರ ದಿಟ್ಟ ಮಾತಿಗೆ ಪಟೇಲ್‌ರಿಂದ ಖಚಿತ ಉತ್ತರ ಬಂದಿತ್ತು.

ದಿನಾಂಕ: ೦೮.೦೫.೧೯೪೯ರಂದು ಹಾಸನದಲ್ಲಿ ಕೆ.ಎಂ. ರುದ್ರಪ್ಪನವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಯುವ ಸಮ್ಮೇಳನವನ್ನು ಶ್ರೀಯುತ ಹಾರನಹಳ್ಳಿಯವರ ನಾಯಕತ್ವದಲ್ಲಿ ಆಯೋಜಿಸಲಾಯಿತು. ಕರ್ನಾಟಕ ಪ್ರಾಂತ್ಯ ರಚನೆ ಮಾಡಬೇಕೆಂದು ಒತ್ತಾಯಿಸಿತಲ್ಲದೆ, ಹಾಗೇನಾದರೂ ಅಗದಿದ್ದರೆ ಅದು ಪ್ರಜೆಗಳ ಅಭಿಪ್ರಾಯವನ್ನು ಪುರಸ್ಕರಿಸುವ ಪ್ರಜಾಪ್ರಭುತ್ವ ವಿಧಾನ ಅಲ್ಲವೆಂದು, ಕನ್ನಡಿಗರು ಹೊಸ ಸಂವಿಧಾನವನ್ನು ತಿರಸ್ಕರಿಸುತ್ತಾರೆ ಎಂಬ ಗೊತ್ತುವಳಿಯನ್ನು ಸ್ವೀಕರಿಸಿತು. ಕನ್ನಡಿಗರ ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಪ್ರಗತಿಗೆ ಅವಶ್ಯಕವಾದ ಅಖಂಡ ಕರ್ನಾಟಕ ನಿರ್ಮಾಣಕ್ಕಾಗಿ ಭಾರತದ ಒಕ್ಕೂಟದಲ್ಲಿ ವಿಲೀನಗೊಳ್ಳಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು, ಭಾರತ ಗಣರಾಜ್ಯದ ಉದ್ಘಾಟನೆಯ ಸಂದರ್ಭಕ್ಕೆ ಅಖಂಡ ಕರ್ನಾಟಕ ನಿರ್ಮಾಣ ಆಗಬೇಕೆಂದು ಕೇಂದ್ರ ಸರ್ಕಾರ ಮತ್ತು ಘಟನಾ ಸಮಿತಿಗಳನ್ನು ಒತ್ತಾಯ ಪಡಿಸುವ ನಿರ್ಣಯ ಕೈಗೊಳ್ಳಲಾಯಿತು.

ಕರ್ನಾಟಕ ಯುವಕ ಪರಿಷತ್ ೪ ನೇ ಅಧಿವೇಶನವು ದಿನಾಂಕ: ೦೫.೧೧.೧೯೪೯ರಂದು ಅರಸೀಕೆರೆಯಲ್ಲಿ ಕಾಂಗ್ರೆಸ್ ನಾಯಕಿ ಬಳ್ಳಾರಿ ಸಿದ್ಧಮ್ಮ ಇವರ ಅಧ್ಯಕ್ಷತೆಯಲ್ಲಿ ಸರ್ವಪಕ್ಷಗಳ ಸಮ್ಮೇಳನವನ್ನು ಆಯೋಜಿಸಲಾಯಿತು. ಏಕೀಕರಣಕ್ಕೆ ಸಂಪೂರ್ಣ ಬೆಂಬಲ ನೀಡುವ ನಿರ್ಣಯ ಅಂಗೀಕಾರವಾಯಿತು. ಈ ಅಧಿವೇಶನದಲ್ಲಿ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ರಾಜ ಮಹಾರಾಜರ ಆಳ್ವಿಕೆ ಸಮಂಜಸವಲ್ಲವೆಂದು ಕರ್ನಾಟಕ ರಾಜ್ಯವಾಗಿ ರೂಪುಗೊಳ್ಳುವ, ಭಾರತದಲ್ಲಿ ಈಗಾಗಲೇ ರಾಜ ಮಹಾರಾಜರು ತಮ್ಮ ಸ್ಥಾನಮಾನಗಳನ್ನು ಅರಿತು ತಾವೇ ಅಧಿಕಾರದಿಂದ ಹಿಂದೆ ಸರಿದು ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸುತ್ತಿರುವ ಸಂದರ್ಭದಲ್ಲಿ ಮೈಸೂರು ಕಾಂಗ್ರೆಸ್ ಸಮಿತಿ ಮತ್ತು ಕೆ.ಪಿ.ಸಿ.ಸಿಗಳು ಮಹಾರಾಜರನ್ನೆ ಮುಖ್ಯಸ್ಥರನ್ನಾಗಿ ಹೊಂದಿರುವ ಏಕೀಕೃತ ಕರ್ನಾಟಕ್ಕೆ ಹಂಬಲಿಸುತ್ತಿರುವುದನ್ನು ಹಾಗೇ ಆ ಕಾರಣದಿಂದ ಏಕೀಕರಣದ ಅವಕಾಶಗಳನ್ನು ಮುಂದೂಡುತ್ತಿರುವುದನ್ನು ಸಭೆ ಖಂಡಿಸಿತು. ಯಾವುದೇ ಸಂವಿಧಾನಾತ್ಮಕ ಅಡಚಣೆ ಇಲ್ಲದಿರುವುದರಿಂದ ೨೬–೦೧–೧೯೫೦ರಂದು ರೂಪುಗೊಳ್ಳಲಿರುವ

ಭಾರತ ಗಣರಾಜ್ಯದಲ್ಲಿ ಅಂದೇ ಕರ್ನಾಟಕ ರಾಜ್ಯವು ಅಸ್ತಿತ್ವಕ್ಕೆ ಬರುವಂತೆ ಘಟನಾತ್ಮಕ ಸಮಿತಿಯ ಅಧ್ಯಕ್ಷರು ಏರ್ಪಾಡುಗಳನ್ನು ಮಾಡಬೇಕೆಂದು ಈ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯವನ್ನು ಕೈಗೊಂಡರು. ಈ ಅಧಿವೇಶನಕ್ಕೆ ಕುವೆಂಪುರವರನ್ನು ಆಹ್ವಾನಿಸಿದ್ದರು ಆದರೆ ಅನಿವಾರ್ಯ ಕಾರಣಗಳಿಂದ ಕುವೆಂಪು ಅವರ ಉಪಸ್ಥಿತಿ ಸಾಧ್ಯವಾಗಲಿಲ್ಲ ಹಾಗೂ ಕುವೆಂಪುರವರು ಸಮಾವೇಶಕ್ಕೆ ತಮ್ಮ ಕ್ರಾಂತಿ ಕಹಳೆಯಂತಿರುವ 'ಅಖಂಡ ಕರ್ನಾಟಕ' ಎಂಬ ಕವಿತೆಯನ್ನು ಬರೆದು ಕಳುಹಿಸಿ ಶುಭ ಹಾರೈಸಿದ್ದರು. ಈ ನಾಲ್ಕು ಸಮ್ಮೇಳನಗಳು ಕರ್ನಾಟಕ ಏಕೀಕರಣ ಚಳವಳಿಯ ನಾಲ್ಕು ಅಧಾರ ಸ್ತಂಭಗಳಂತಿದ್ದು ಈ ಸಮ್ಮೇಳನದ ಯಶಸ್ಸಿನ ಹಿಂದೆ ಹಾರನಹಳ್ಳಿ ರಾಮಸ್ವಾಮಿಯವರ ಹೋರಾಟ ಅಪಾರವಾದದ್ದು, ಅವರ ದಿಟ್ಟತನ, ಹಿಡಿದ ಕೆಲಸ ಸಾಧಿಸುವ ಛಲ, ಸ್ವಾಭಿಮಾನ ಅಖಂಡ ಕರ್ನಾಟಕ ಕನಸು ವರ್ಣನಾತೀತ ಈ ಸಮ್ಮೇಳನಗಳು ಅವರ ಸಂಘಟನಾತ್ಮಕ ಚಾತುರ್ಯಕ್ಕೆ, ಹೋರಾಟಕ್ಕೆ ಹಿಡಿದ ಕೈಗನ್ನಡಿಯಂತಿದ್ದವು.

೧೯೫೧ರ ಜುಲೈನಲ್ಲಿ ಬೆಂಗಳೂರಿನಲ್ಲಿ ಎ.ಐ.ಸಿ.ಸಿ.ಸಭೆ ಪುರುಷೊತ್ತಮ ದಾಸ್ ಟಂಡನ್ ಅಧ್ಯಕ್ಷತೆಯಲ್ಲಿ ಕರ್ನಾಟಕ ಪ್ರಾಂತ್ಯ ರಚನಾ ಸಮ್ಮೇಳನವನ್ನು ವ್ಯವಸ್ಥೆ ಮಾಡಲಾಗಿತ್ತು. ಆರ್. ಆನಂತರಾಮನ್ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಬಸವಲಿಂಗಪ್ಪನವರು ಅದರ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದರು. ಹುಬ್ಬಳ್ಳಿ–ಧಾರವಾಡಗಳಲ್ಲೂ ಈ ಚಳವಳಿ ಬಹಳ ಜೋರಾಗಿ ನಡೆಯುತ್ತಿತ್ತು. ೧೯೫೧ರ ಜುಲೈ ಹನ್ನೊಂದರಂದು ಟಿ. ಸುಬ್ರಹ್ಮಣ್ಯಂ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಆಂಧ್ರ ನಾಯಕ ಕಾಳಾವೆಂಕಟರಾಯರಿಂದ ಉದ್ಘಾಟನೆ. ಆಗ ರಾಮಸ್ವಾಮಿಯವರು 'ಸಮೃದ್ಧ ಕರ್ನಾಟಕ' ಎಂಬ ಪುಸ್ತಕವನ್ನು ಬರೆದು ಪ್ರಕಟಿಸಿದರು. ಅದರಲ್ಲಿ ರಾಜ್ಯ ರಚನೆಯಿಂದ ಆಗುವ ಲಾಭ ಕುರಿತು ವಿವರಿಸಲಾಗಿತ್ತು. ಪುಸ್ತಕದ ಸಾವಿರಾರು ಪ್ರತಿಗಳು ಸಮ್ಮೇಳನದಲ್ಲಿ ಮಾರಾಟವಾಗಿದ್ದವು.

೧೯೫೨ ರಲ್ಲಿ ಚುನಾವಣೆಯಾಗಿ ಕೆ.ಹನುಮಂತಯ್ಯ ಮುಖ್ಯಮಂತ್ರಿ ಯಾದರು. ಆಗ ಕೆ.ಸಿ. ರೆಡ್ಡಿಯವರು ಕೇಂದ್ರದ ಮಂತ್ರಿಗಳಾದರು. ಹನುಮಂತಯ್ಯನವರು ಕರ್ನಾಟಕ, ಕನ್ನಡ ಕುರಿತು ಮಮತೆ, ಅಭಿಮಾನ ಹೊಂದಿದ್ದು ಸಾಹಿತ್ಯ, ಸಂಸ್ಕೃತಿಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಕೇಂದ್ರದಲ್ಲಿ ಮತ್ತೆ ರಾಜ್ಯ ರಚನೆ ಬಗ್ಗೆ ಒತ್ತಾಯ ತರುವ ಉದ್ದೇಶದಿಂದ ಶಾಸಕರು, ಮೈಸೂರು ಕಾಂಗ್ರೆಸ್ ಸದಸ್ಯರು ತಯಾರಿಸಿದ ಮನವಿಗೆ ಬಹುಜನರ ಸಹಿ ಹಾಕಿಸಲಾಯಿತು. ಆಗ ರಾಜ್ಯದ ಅನೇಕ ನಾಯಕರು ರಾಜ್ಯ ರಚನೆಯ ಪರ ನಿಲ್ಲುವ ನಿರ್ಧಾರ ತಳೆದರು. ಈ ಹಿನ್ನೆಲೆಯಲ್ಲೇ ೧೯೫೩ನೇ ಜನವರಿಯಲ್ಲಿ ಹೈದರಾಬಾದಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆಯಿತು.ಆಗ ಅದಕ್ಕೆ ಅಲ್ಲಿಯ ಒಬ್ಬ ದೊಡ್ಡ ಸ್ವಾತಂತ್ರ್ಯ ಹೋರಾಟಗಾರ 'ನಾನಲ್' ಎಂಬುವವರ ಹೆಸರನ್ನು ಇಟ್ಟಿದ್ದರು. ಆ ಸಭೆಗೆ ರಾಮಸ್ವಾಮಿಯವರು, ಸಿದ್ಧವೀರಪ್ಪ, ಬಿ.ಕೆ. ನರಸಿಂಹಮೂರ್ತಿ, ಶ್ರೀಧರ್, ತುಮಕೂರಿನ ಆರ್.ಎಸ್. ಆರಾಧ್ಯ ಹೀಗೆ ಹದಿನೈದು, ಇಪ್ಪತ್ತು ಜನ ಹೋದರು. ಇಡೀ ಆಂಧ್ರದಲ್ಲಿ ರೈಲು ನಿಲ್ಲಿಸಿದ್ದರು. ಆಂಧ್ರಪ್ರದೇಶ ಎಂದು ಒಪ್ಪಿಗೆ ಕೊಡುವ ನಿರ್ಣಯ ಅಧಿವೇಶನದಲ್ಲಿ ನಿರ್ಧಾರವಾಗುವುದರಲ್ಲಿತ್ತು. ಕರ್ನಾಟಕದಿಂದ ಹೋದವರು ಹಿಂದಿನ ರಾತ್ರಿಯೆಲ್ಲಾ ಚರ್ಚೆ ಮಾಡಿದ್ದರು. ಹನುಮಂತಯ್ಯನವರು ತೀವ್ರವಾದ ಕ್ರಮ ತೆಗೆದು ಕೊಳ್ಳುವಂತೆ ಒಪ್ಪಿಸ ಬೇಕೆಂದು ತೀರ್ಮಾನಿಸಿದ್ದರು.



ಹನುಮಂತಯ್ಯನವರಿಗೆ ಸ್ವಲ್ಪ ಆತಂಕವಾಗಿತ್ತು 'ಅಲ್ಲಪ್ಪಾ, ನಾನು ಕರ್ನಾಟಕ ಆಗಬೇಕು ಅಂತ ಹೇಳಿದರೆ ನನ್ನನ್ನು ಅಧಿಕಾರದಿಂದ ಇಳಿಸಿ ಬಿಡುತ್ತಾರಲ್ಲಪ್ಪ ಎಂದಿದ್ದರು. ಆಗ ರಾಮಸ್ವಾಮಿಯವರು ಹೇಳಿದ್ದರು. ಅಲ್ಲ ಸಾರ್, ಎಷ್ಟು ದಿನ ಇದ್ದರೂ ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿ ಅಷ್ಟೇ ತಾನೆ? ಕರ್ನಾಟಕದ ಪರ ನೀವು ನಿಂತರೆ ಆಧುನಿಕ ವಿದ್ಯಾರಣ್ಯರಾಗುತ್ತೀರಿ. ನಿಮಗೆ ಶಾಶ್ವತವಾದ ಕೀರ್ತಿ ಬರುತ್ತೆ ನೋಡಿ! ಅವರಿಗೆ ಆ ಮಾತುಗಳು ಉತ್ಸಾಹ ತುಂಬಿದ್ದವು. ಮಾರನೇ ದಿನ ಸಭೆ ಪ್ರಾರಂಭವಾಯಿತು. ರಾಮಸ್ವಾಮಿಯವರು ವೇದಿಕೆಗೆ ಹೋಗಿ ನಿರ್ಣಯ ಕುರಿತು ಮಾತನಾಡ ಬಯಸಿದಾಗ ಪಂಡಿತ ನೆಹರೂ ಖಂಡ ತುಂಡವಾಗಿ ನಿರಾಕರಿಸಿದ್ದರು. ಹುಡುಗನೇನು ಮಾತನಾಡಬಲ್ಲ ಎಂಬ ಧೋರಣೆ, ಅಲ್ಲದೆ ಅವರು ಭಾಷಾವಾರು ಪ್ರಾಂತ ರಚನೆ ತತ್ವಕ್ಕೆ ವಿರೋಧವಾಗಿದ್ದರು. ಅನಿವಾರ್ಯವಾಗಿ ಆಂಧ್ರ ರಚನೆಗೆ ಒಪ್ಪಿದ್ದರಷ್ಟೆ 'ಯು ಆರ್ ಫ್ರಂ ಮೈಸೂರ್, ನಾಟ್ ಪಾಸಿಬಲ್' ಎಂದಿದ್ದರು. ರಾಮಸ್ವಾಮಿಯವರಿಗೆ ಹೇಗಾದರೂ ಮಾತನಾಡಬೇಕೆಂಬ ಛಲ, ಆ ಕಾಲದಲ್ಲಿ ಪ್ರತಿಯೊಬ್ಬರಿಗೂ ಮಾತನಾಡಲು ಅವಕಾಶವಿರುತ್ತಿತ್ತು. ವಿಷಯಗಳ ವಿಸ್ತೃತವಾದ ಚರ್ಚೆ ನಡೆಯುತ್ತಿತ್ತು. ರಾಮಸ್ವಾಮಿಯವರು ಮೂಲ ಗೊತ್ತುವಳಿಗೆ ಆಂಧ್ರದೊಡನೆ ಕರ್ನಾಟಕವೂ ರಚನೆ ಆಗಬೇಕೆಂಬ ತಿದ್ದುಪಡಿಯನ್ನು ಕಳುಹಿಸಿದರು. ತಿದ್ದುಪಡಿ ಹೋದ ಮೇಲೆ ಕರೆಯಲೇಬೇಕಾಗಿತ್ತು. ಸರಿ, ಕರೆದರು. ಸುಮಾರು ಹದಿನೈದಿಪ್ಪತ್ತು

ನಿಮಿಷ ಬಹು ಬಿರುಸಿನಿಂದ ರಾಮಸ್ವಾಮಿಯವರು ಕರ್ನಾಟಕ ರಾಜ್ಯ ರಚನೆಯ ಬಗ್ಗೆ ಹೇಳುತ್ತಾ ಅದಕ್ಕೆ ತಕ್ಕಂತೆ ಚಾರಿತ್ರಿಕವಾದ ಕಾರಣ, ಸಾಂಸ್ಕೃತಿಕ ಕಾರಣ, ಭಾಷಾ ದೃಷ್ಟಿಯ ಕಾರಣ ಮತ್ತು ಕಾಂಗ್ರೆಸ್‌ನ ಪ್ರಣಾಳಿಕೆಯಲ್ಲಿ ಭಾಷಾವಾರು ಪ್ರಾಂತದ ರಚನೆಯಿದೆ ಎಂದೆಲ್ಲಾ ವಿವರಿಸಿದರು. ಕೊನೆಗೆ ರಾಷ್ಟ್ರನಾಯಕರ ಕಾರ್ಯವೈಖರಿಯನ್ನೂ ಟೀಕಿಸಿದ್ದರು. "ಮೂರು ಕೋಟಿ ಕನ್ನಡಿಗರ ನೋವನ್ನು, ಭಾವನೆಗಳನ್ನು ನೀವು ಅರ್ಥ ಮಾಡಿಕೊಳ್ಳಲಾರಿರಿ. ಇದು ನಮಗೆ ಬಹಳ ನೋವುಂಟು ಮಾಡುತ್ತಿದೆ. ಈ ನಮ್ಮ ನಾಯಕರು ಸಮಸ್ಯೆ ಬಗೆಹರಿಸುವ ಪ್ರಯತ್ನ ಮಾಡದೆ ಅದನ್ನು ಪಕ್ಕಕ್ಕೆ ತಳ್ಳುತ್ತಿದ್ದಾರೆ" ಎಂದಿದ್ದರು. ನೆಹರೂಗೆ ಅಸಾಧ್ಯ ಸಿಟ್ಟು ಬಂದಿತ್ತು. ಮುಖವೆಲ್ಲಾ ಕೆಂಪಾಗಿ ಹೋಗಿತ್ತು ಹುಡುಗ ಏನು ಮಾತಾಡಿಯಾನೆಂಬ ಧೋರಣೆಯಿದ್ದ ನಾಯಕರಿಗೆ ಮಾತು ಸಾಕಷ್ಟು ಪರಿಣಾಮ ಬೀರಿತ್ತು. ಚುರುಕು ಮುಟ್ಟಿತ್ತು. 'ಯಾರು ಮುಂದಕ್ಕೆ ಹಾಕುತ್ತಿದ್ದಾರೆ?' ಎಂದು ನೆಹರು ಗರ್ಜಿಸಿದ್ದರು. ರಾಮಸ್ವಾಮಿಯವರು 'ನೀವು ದಿ ಗ್ರೇಟ್ ಜವಹರಲಾಲ್ ನೆಹರು, ಹೀಗೆ ನಮ್ಮ ಸಮಸ್ಯೆಯನ್ನು ಮುಂದಕ್ಕೆ ಹಾಕುತ್ತಿದ್ದೀರಿ' ಎಂದು ಅಷ್ಟೇ ದಿಟ್ಟತನದಿಂದ ಉತ್ತರಿಸಿದ್ದರು. 'ನೀವು ಎಲ್ಲವನ್ನೂ ಕರ್ನಾಟಕ ವಿರುದ್ಧವಾಗಿಯೇ ಮಾಡುತ್ತಿದ್ದೀರಿ' ಎಂಬ ಆಪಾದನೆಯನ್ನೂ ಧೈರ್ಯವಾಗಿ ಮಾಡಿದ್ದರು. 'ನೀನು ಅಧಿಕಾರವಿಲ್ಲದೆ ಮಾತನಾಡುತ್ತಿದ್ದೀಯೇ' ಎಂದಿದ್ದರು ನೆಹರು. ಆದರೆ ಇವರೆಲ್ಲ ಮೈಸೂರು ಪ್ರೊವಿನ್ಸಿಯಲ್ ಕಾಂಗ್ರೆಸ್ ಸಮಿತಿಯ ಅರ್ಧಕ್ಕಿಂತ ಹೆಚ್ಚು ಸದಸ್ಯರ ಸಹಿ ತೆಗೆದುಕೊಂಡೇ ಹೋಗಿದ್ದರು. ಅದು ಅಲ್ಲೇ ವೇದಿಕೆಯ ಮುಂದೆ ಕುಳಿತಿದ್ದ ತುಮಕೂರಿನ ಆರ್.ಎಸ್. ಆರಾಧ್ಯರ ಬಳಿ ಇತ್ತು. ರಾಮಸ್ವಾಮಿಯವರು ಅಲ್ಲಿಗೆ ಹೋಗಿ 'ಆರಾಧ್ಯರೆ, ಕೊಡಿ, ಅದನ್ನ' ಎಂದು ತೆಗೆದುಕೊಂಡು ಹೋಗಿ ವೇದಿಕೆಯ ಮೇಲೆ ಒಗೆದು, 'ಇದೋ ಇಲ್ಲಿದೆ ಅಧಿಕಾರ, ನೂರಕ್ಕೆ ಅರವತ್ತರಷ್ಟು ಶಾಸಕರು, ಪ್ರಾಂತ ಕಾಂಗ್ರೆಸ್ ಸಮಿತಿ ಸದಸ್ಯರು ಕರ್ನಾಟಕದ ಪರ ಸಹಿ ಮಾಡಿದ್ದಾರೆ. ನಾನು ಈ ಅಧಿಕಾರ ಸಹಿತವಾಗಿ ಮಾತನಾಡಿದ್ದೇನೆ' ಎಂದು ಬಿಟ್ಟರು.

ನಿಜಲಿಂಗಪ್ಪನವರ ಹೊರತಾಗಿ ಮೈಸೂರಿನವರೆಲ್ಲ ಕರ್ನಾಟಕ ರಾಜ್ಯ ರಚನೆಗೆ ವಿರುದ್ಧವೆಂದು ಭಾವಿಸಿದ್ದ ನೆಹರೂ ಅವರಿಗೆ ಗೊಂದಲವಾಗಿತ್ತು. ರಾಮಸ್ವಾಮಿಯವರು ತಮ್ಮ ಮಾತು ಮುಗಿಸಿದ ನಂತರ ನೆಹರೂರವರು ವೇದಿಕೆಯ ಹಿಂದುಗಡೆಯ ಸಾಲಿನಲ್ಲಿ ಕುಳಿತಿದ್ದ ಎಚ್.ಸಿ. ದಾಸಪ್ಪನವರ ಬಳಿಗೆ ಹೋಗಿ ಕೈ ಹಿಡಿದು ಎಳೆದುಕೊಂಡೇ ಬಂದು ಮೈಕಿನ ಮುಂದೆ ನಿಲ್ಲಿಸಿದ್ದರು. ಅವರು ತಮ್ಮ ಎಂದಿನ ದಾಟಿಯಲ್ಲಿ ರಾಮಸ್ವಾಮಿಯವರು ಹನುಮಂತಯ್ಯನವರಿಗೆ, 'ಇದು ನೀವು ಮಾತನಾಡಬೇಕಾದ ಸರಿಯಾದ ಸಮಯ' ಎಂದರು. ನೆಹರೂ ಕರೆದರೆ ನಾನು ಮಾತನಾಡುತ್ತೇನೆ' ಎಂದಿದ್ದರು ಹನುಮಂತಯ್ಯ, ಅವರು ಕರೆಯದೇ ಹೋದರೆ? ಅವಕಾಶವೇ ತಪ್ಪಿ ಹೋಗುವುದಲ್ಲ, ಎಂದು ರಾಮಸ್ವಾಮಿಯವರು ತಾವೇ ಒಂದು ಚೀಟಿಯಲ್ಲಿ ಬರೆದು ಕಳುಹಿಸಿದ್ದರು. ಕೆ. ಹನುಮಂತಯ್ಯ, ಮುಖ್ಯಮಂತ್ರಿಗಳು ಮಾತನಾಡ ಬಯಸುತ್ತಾರೆ ಎಂದು. ಅದನ್ನು ನೋಡಿದ ತಕ್ಷಣ ನೆಹರೂ ಅವರಿಂದ ಕರೆ ಬಂದಿತ್ತು. ಮೈಸೂರಿನ ಎಲ್ಲ ನಾಯಕರೂ ರಾಜ್ಯ ರಚನೆಗೆ ವಿರೋಧವಾಗಿಯೇ ಇರುತ್ತಾರೆಂಬ ನಂಬಿಕೆ ನೆಹರೂ ಅವರಿಗಿತ್ತು. ಹನುಮಂತಯ್ಯನವರ ಅಂದಿನ ಭಾಷಣ ಬಹು ಪ್ರಖರವಾಗಿತ್ತೆಂದು ಎಲ್ಲರೂ ಅಭಿಪ್ರಾಯ ಪಟ್ಟಿದ್ದರು. ನೆಹರೂ ಅಂತೂ ದಿಗ್ಭ್ರಮೆಗೊಂಡು ಕುಳಿತು ಬಿಟ್ಟಿದ್ದರು. 'ನಾವು ಮೂರು ಕೋಟಿ ಜನರ ಪರವಾಗಿ ಮಾತನಾಡುತ್ತಿದ್ದೇವೆ, ಚಾರಿತ್ರಿಕವಾಗಿ ಒಂದಾಗಿದ್ದವರು, ವಿಜಯನಗರ ಸಾಮ್ರಾಜ್ಯ ಕಟ್ಟಿದವರು' ಎಂದೆಲ್ಲಾ ಹೇಳಿ, 'ಕರ್ನಾಟಕ ರಾಜ್ಯ ರಚನೆಯಾದರೆ ದೇಶ ಅರಬ್ಬೀ ಸಮುದ್ರದಲ್ಲಿ ಮುಳುಗುತ್ತದೆಯೇ? ಜನರ ಆಸೆ, ಆಕಾಂಕ್ಷೆಗಳಿಗೆ, ಭಾವನೆಗಳಿಗೆ ಬೆಲೆ ಕೊಡಬೇಕು' ಎಂದು ಬಹಳ ಚೆನ್ನಾಗಿ ಮಾತನಾಡಿದ್ದರು. ನೆಹರು ಆಮೇಲೆ ರಾಮಸ್ವಾಮಿಯವರನ್ನು ಕರೆದು 'ನೋಡು, ನಾನು ಖಂಡಿತ ಇದನ್ನು ಪರಿಶೀಲಿಸುತ್ತೇನೆ, ನಿನ್ನ ತಿದ್ದುಪಡಿಯನ್ನು ಮತಕ್ಕೆ ಹಾಕಲು ಅವಕಾಶ ಕೊಡ ಬೇಡ, ಹಿಂತೆಗೆದುಕೊ' ಎಂದಿದ್ದರು. ಆದರೂ ರಾಮಸ್ವಾಮಿಯವರು ಪಟ್ಟು ಬಿಡಬಾರದೆಂದು 'ನೀವು ನಮ್ಮ ಮಾತಿಗೆ ಗ್ಯಾರಂಟಿ ಕೊಟ್ಟರೆ ನಾನು ಹಿಂತೆಗೆದು ಕೊಳ್ಳುತ್ತೇನೆ' ಎಂದಿದ್ದರು. 'ಹೇಳ್ತೀನಲ್ಲಪ್ಪಾ, ನಾನು ನಿಮ್ಮ ಮುಖ್ಯಮಂತ್ರಿ ಹನುಮಂತಯ್ಯನ ಜೊತೆ ಮಾತನಾಡ್ತೀನಿ' ಎಂದಾಗ ಹನುಮಂತಯ್ಯನವರೂ 'ಆಯ್ತು' ಎಂದಿದ್ದರು.

ಈ ಸಭೆಯ ಪ್ರಭಾವ ಅಂದು ಸಂಜೆಯೇ ಅರಿವಾಗಿತ್ತು. ಅಂದು ಮೈಸೂರಿನವರಾದ ಲಕ್ಷ್ಮೀಅರಸು ಎಂಬ ಕೈಗಾರಿಕೋದ್ಯಮಿಯ ಮನೆಯಲ್ಲಿ ಮೈಸೂರಿನಿಂದ ಹೋದವರಿಗೆ ಮತ್ತು ನೆಹರೂಗೆ ಸಂಜೆಯ ಟೀ ಪಾರ್ಟಿಗೆ ಆಹ್ವಾನ ನೀಡಿದ್ದರು. ಅವರು ಅಖಿಲ ಭಾರತ ಮಟ್ಟದ ಕೈಗಾರಿಕೋದ್ಯಮಿ, ನೆಹರು ಬಂದರು, ಮೈಸೂರಿನವರೆಲ್ಲ ಮೊದಲೇ ಸೇರಿದ್ದರು. ರಾಮಸ್ವಾಮಿಯವರು ಸ್ವಲ್ಪ ಹಿಂದೇ ಇದ್ದರು ಮತ್ತು ಏನು ಅಸಮಾಧಾನದ ಮಾತು ಪ್ರಾರಂಭವಾಗುವುದೋ ಎಂದು, ನೆಹರೂ ಹನುಮಂತಯ್ಯನವರ

ಹೆಗಲ ಮೇಲೆ ಕೈ ಹಾಕಿಕೊಂಡೇ ಹಾರನಹಳ್ಳಿ ರಾಮಸ್ವಾಮಿ, ಡಾ.ನಾಗಪ್ಪ ಆಳ್ವ, ಲೋಕೋಪಯೋಗಿ ಸಚಿವ ವೀರೇಂದ್ರ ಪಾಟೀಲ್, ಕೆ. ಲಕ್ಕಪ್ಪ, ಸಿದ್ದನಂಜಪ್ಪ ಬಂದರು. ಎದುರಿಗೆ ಕಂಡ ರಾಮಸ್ವಾಮಿಯವರನ್ನು ಉದ್ದೇಶಿಸುತ್ತಾ 'ಹನುಮಂತಯ್ಯ, ಈತ ಜವಾಬ್ದಾರಿಯಿಲ್ಲದೆ ಮಾತನಾಡುತ್ತಾನೆಂದು ತಿಳಿದಿದ್ದೆ. ಆದರೆ ನೀನು ನನ್ನ ಕಣ್ಣು ತೆರೆಸಿದೆ. ನಿನ್ನ ಮಾತು ನನ್ನ ನಿಲುವನ್ನು ಬದಲಿಸುವಂತೆ ಮಾಡಿತು. ಈಗ ನಾನು ಇದಕ್ಕೆ ಏನಾದರೂ ಮಾಡಲೇಬೇಕು' ಎಂದು ಹೇಳಿದ್ದಲ್ಲದೆ ರಾಮಸ್ವಾಮಿಯವರ ಹೆಗಲ ಮೇಲೂ ಕೈ ಹಾಕಿ ಆತ್ಮೀಯವಾಗಿ ಮಾತನಾಡಿಸಿದ್ದರು.

ಇದು ಕರ್ನಾಟಕದಲ್ಲೆಲ್ಲಾ ಒಂದು ರೀತಿಯಲ್ಲಿ ಮೈನವಿರೇಳಿಸುವಂತೆ ವಾತಾವರಣ ಸೃಷ್ಟಿಸಿತ್ತು. ಇದಾದ ಹದಿನೈದು ದಿನಗಳಲ್ಲಿ ರಾಮಸ್ವಾಮಿಯವರನ್ನು ಆದವಾನಿಗೆ ಕರೆಸಿ ಆನೆ ಮೇಲೆ ಕೂರಿಸಿ ಮೆರವಣಿಗೆ ಮಾಡಿದ್ದರು. ಪತ್ರಿಕೆಗಳಲ್ಲೆಲ್ಲಾ ಈ ಸಭೆಯ ಸುದ್ದಿ ದೊಡ್ಡದಾಗಿ ಬಂದಿತ್ತು. ಕರ್ನಾಟಕದಲ್ಲಿ ಇವರೆಲ್ಲಾ ಮೇಲ್ಮಟ್ಟದ ನಾಯಕರಲ್ಲದಿದ್ದರೂ ಏಕೀಕರಣದ ಚಳವಳಿ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಸ್ವರೂಪ ಕೊಟ್ಟು, ಚಾಲನೆ ಕೊಟ್ಟು ಜನ ಮೆಚ್ಚುವಂತಹ ಕೆಲಸ ಮಾಡಿದ್ದರು. ಆದರೆ ಮೈಸೂರಿನಲ್ಲಿನ ನಾಯಕರೆಲ್ಲ ಹನುಮಂತಯ್ಯನವರನ್ನು ಇಳಿಸಲು ಸಂಚು ಮಾಡಿ, ಅವರ ಸಂದೇಹ ನಿಜವಾಗುವಂತೆ ಮಾಡುತ್ತಿದ್ದರು. ಇದರಲ್ಲಿ ನಿಜಲಿಂಗಪ್ಪ, ಸುಬ್ರಹ್ಮಣ್ಯಂ ಅವರೂ ಸೇರಿದ್ದರು. ಕರ್ನಾಟಕ ರಾಜ್ಯ ರಚನೆಗೆ ಬೆಂಬಲ ಕೊಟ್ಟವರನ್ನೆ ಇಳಿಸಿದರೆ ಕೆಲಸ ಕೈಗೂಡುತ್ತದೆಯೇ? ತೊಂದರೆಯಾಗುವುದಿಲ್ಲವೇ? ರಾಮಸ್ವಾಮಿಯವರು ಮತ್ತೆ ರಾಯಭಾರಿಯಾದರು. ಗಾಂಜಿ ವೀರಪ್ಪ, ಡಿ. ಎಂ. ಸಿದ್ದಯ್ಯ, ಸುಬ್ರಹ್ಮಣ್ಯ ಅವರನ್ನೆಲ್ಲಾ ಕಂಡು, ಕರ್ನಾಟಕ ರಚನೆಗೆ ಮೊದಲಿನಿಂದ ಬೆಂಬಲ ಕೊಟ್ಟವರನ್ನು ಚಳವಳಿಯ ಕೊನೆಯ ಹಂತದಲ್ಲಿ ಇಳಿಸುವುದು ತರವಲ್ಲವೆಂದು ವಾದಿಸಿದರು. ಪರಿಣಾಮದ ಅಪಾಯವನ್ನು ಮನನವಾಗುವಂತೆ ತಿಳಿಸಿದ್ದರು. ಅವರನ್ನೂ ನಂತರ ನಿಜಲಿಂಗಪ್ಪನವರನ್ನೂ ಒಪ್ಪಿಸಿದರು. ಬಂದಿದ್ದ ಗಂಡಾಂತರ ತಪ್ಪಿ ಹನುಮಂತಯ್ಯ ಮುಖ್ಯಮಂತ್ರಿಯಾಗಿ ಮುಂದುವರಿದರು.

ಹೈದರಾಬಾದ್ ಅಧಿವೇಶನದ ವಿದ್ಯಮಾನಗಳ ಪರಿಣಾಮವಾಗಿ ನೆಹರು ರಾಜ್ಯ ಪುನರ್ವಿಂಗಡಣಾ ಸಮಿತಿ ನೇಮಿಸಿದರು. ಅದೇ ಫಜಲ್ ಅಲಿ ಕಮೀಷನ್, ಫಜಲ್ ಅಲಿ ಅಧ್ಯಕ್ಷರು, ಪಂಡಿತ ಹೃದಯನಾಥ ಕುಂಜ್ರು, ಎ.ವಿ. ಫಣಿಕ್ಕರ್ ಸದಸ್ಯರು. ಆಗ ಅಖಿಲ ಭಾರತ ಮಟ್ಟದಲ್ಲಿ ಯು.ಎನ್. ದೇಬರ್ ಕಾಂಗ್ರೆಸ್



ಅಧ್ಯಕ್ಷರಾಗಿದ್ದರು. ಎಂ.ವಿ. ರಾಮರಾವ್ ಎ.ಐ.ಸಿ.ಸಿ. ಕಾರ್ಯದರ್ಶಿಯಾಗಿದ್ದರು. ಸಮಿತಿಯೊಂದಿಗೆ ಇವರಿಬ್ಬರೂ ಕೂಡಿ ಕರ್ನಾಟಕ ರಾಜ್ಯಾದ್ಯಂತ ಪ್ರವಾಸ ಮಾಡಿ ಜನಾಭಿಪ್ರಾಯ ಸಂಗ್ರಹಿಸಿದರು. ಬೆಂಗಳೂರಿನಲ್ಲಿ ಅನೇಕ ಹಿರಿಯರು ಕರ್ನಾಟಕ ಆಗಬೇಕು ಎಂದರೆ ಮಂಡ್ಯದಲ್ಲಿ ನೂರಕ್ಕೆ ನೂರರಷ್ಟು ವಿರುದ್ಧ ಅಭಿಪ್ರಾಯ ಬಂದಿತ್ತು. ಅಲ್ಲಿಂದ ನೇರ ಹಾಸನಕ್ಕೆ ಹೋದರು. ಎಂ.ವಿ.ರಾಮರಾವ್ ಹೇಳಿದ್ದರಂತೆ ಹಾಸನಕ್ಕೆ ಹೋದರೆ ವ್ಯತ್ಯಾಸ ತಿಳಿಯುತ್ತದೆ ಎಂದು ಹಾಸನದಲ್ಲಿ ಸಾವಿರಾರು ಜನ ಸೇರಿದ್ದರು. ಕರ್ನಾಟಕ ಬೇಕು ಎಂದು ಬೇಡ ಎನ್ನುತ್ತಿದ್ದವರಾರು? ಎ. ಜಿ. ರಾಮಚಂದ್ರ ರಾಯರು, ಎನ್.ಪಿ. ಕಾರ್ಲೆ, ಕೊನೆಗೆ ಕಾರ್ಲೆ ಕೂಡ ಬೇಕು ಎನ್ನುವವರ ಗುಂಪಿನತ್ತಲೇ ಬಂದಿದ್ದರು.ಆದರೆ ಗುಂಪು ಅವರನ್ನು ಓಡಿಸಿತ್ತು. ಮುಂದೆ ಜಿಲ್ಲೆಯ ಎಲ್ಲಾ ತಾಲ್ಲೂಕು ಪರಿಷತ್ತುಗಳ ಪರವಾಗಿ ಅವರಿಗೆ ಒಂದು ಮೆಮೊರಾಂಡಮ್ ಕೊಟ್ಟರು. ಅಲ್ಲಿ ರಾಜಸೇವಾಸಕ್ತ ವೆಂಕಟೇಶಯ್ಯ, ದೇಬರ್ ಬಳಿ ಮಾತನಾಡಲು ಬಂದರು. 'ಮೈಸೂರಿನ ವೈಶಿಷ್ಟವೆಂದರೆ ಅದರದೇ ಸಂಸ್ಕೃತಿ, ಹಾಗೆ, ಹೀಗೆ ಎಂದು' ಅವರು ರಾಜರಿಗೆ ಸೇವೆ ಸಲ್ಲಿಸಲು ಉತ್ಸುಕರಾಗಿದ್ದವರು. 'ಅವರಿಗೆ ರಾಜರ ಅಸ್ತಿತ್ವ ಬೇಕು. ಅದಕ್ಕೇ ಮಾತನಾಡಲು ಬಂದಿದ್ದಾರೆ' ಎಂದು ರಾಮಸ್ವಾಮಿಯವರು ಹೇಳಿದ್ದರು. ಪಾಪ, ವೆಂಕಟೇಶಯ್ಯ ಮೌನವಾಗಿ ಬಿಟ್ಟಿದ್ದರು. ಅದಕ್ಕೆ ಸರಿಯಾಗಿ ಅಂದರೆ ರಾಮಸ್ವಾಮಿಯವರ ಮಾತಿಗೆ ಪ್ರತಿಯಾಗಿ ದೇಬರ್ 'ಹೌದು, ಹೌದು, ನೀವು ಹೇಳುವುದರಲ್ಲಿ ಅರ್ಥವಿದೆ' ಎಂದು ಹೇಳಿ ಕರ್ನಾಟಕ ರಚನೆಗೆ ಪರೋಕ್ಷವಾಗಿ ಅನುಮತಿ ನೀಡಿದ್ದರು.

ಪ್ರವಾಸ ಮುಗಿಸಿ ಸಮಿತಿ ಕೇಂದ್ರಕ್ಕೆ ವರದಿ ನೀಡಿತ್ತು. ಕನ್ನಡನಾಡಿನ ಜನರ ಬಯಕೆಯಂತೆ ಕರ್ನಾಟಕ ರಾಜ್ಯ ರಚನೆಗೆ ಒಪ್ಪಿಗೆ ದೊರೆತು ೧೯೫೬ ರ ನವೆಂಬರ್ ಒಂದರಂದು ಕರ್ನಾಟಕ ರಾಜ್ಯ ಸ್ಥಾಪನೆಯಾಯಿತು. ಕನ್ನಡಿಗರ ಬಯಕೆ ಈಡೇರಿತ್ತು. ಅಂತಿಮವಾಗಿ ಕೋಟ್ಯಾಂತರ ಕನ್ನಡಿಗರ ಅಭಿಲಾಷೆಯಂತೆ ೧೯೭೩ ನವೆಂಬರ್ ೧ರಂದು ಏಕೀಕೃತ ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡಲಾಯಿತು. ಹೀಗೆ ಅರಸಿಕೆರೆ ಜನತೆ ಏಕೀಕರಣಕ್ಕೆ ತನ್ನ ಕೊಡುಗೆಯನ್ನು ನೀಡಿದೆ. ೨೦ ನೇ ಶತಮಾನದಲ್ಲಿ ಸ್ವಾತಂತ್ರ್ಯ ಹೋರಾಟ ಮತ್ತು ಏಕೀಕರಣ ಚಳವಳಿಗಳು ಎರಡು ಒಟ್ಟಿಗೆ ಕೊಂಡೊಯ್ಯುವ ಅನಿವಾರ್ಯತೆ ಕನ್ನಡಿಗರಿಗೆ ಇತ್ತು. ಅದಕ್ಕಾಗಿ ಹಾಸನ ಮತ್ತು ಅರಸೀಕೆರೆ ಜನತೆ ತಮ್ಮನ್ನು ಈ ಹೋರಾಟಗಳಲ್ಲಿ ತೊಡಗಿಸಿಕೊಂಡು ಈ ಹೋರಾಟಗಳ ಯಶಸ್ಸಿಗೆ ಕಾರಣರಾಗಿದ್ದಾರೆ ಎನ್ನಬಹುದು.

## ಆಧಾರ ಗ್ರಂಥಗಳು

1. Hayavadan Rao – Myore Gazzatteer, Compiled for Government, Vol I & V, Government press, Bangalore, 1929-1936. Reprint at Vinayaka Printers, Bangalore, 2004.
2. Abhishankar. K. – Mysore state gazetteer, Hassan District, Government Press, Bangalore, 1971.
3. Suryanath U Kamath – Karnataka State Gazetteer, Vol. I & II, Govt. Of Karnataka, 1983.
4. H.S. Doreswamy – From Princely State to people Government, Sahithya Mandira, Bangalore -1993
5. Halappa .G.S – History of Freedom Movement in Karnataka, (2 volumes), Mysore Government Publication Bangalore -1962

೬. ಡಾ. ಸಿ.ಆರ್. ಗೋವಿಂದ ರಾಜು – ಕರ್ನಾಟಕ ಏಕೀಕರಣ ಹಾಗೂ ನಾಮಕರಣ, ಕರ್ನಾಟಕ ವಿಧಾನ ಮಂಡಲ ಗ್ರಂಥಾಲಯ, ವಿಧಾನ ಸೌಧ ಬೆಂಗಳೂರು – ೨೦೦೫.

೭. ಡಾ. ಹೆಚ್.ಎಸ್. ಗೋಪಾಲರಾವ್ – ಕರ್ನಾಟಕ ಏಕೀಕರಣ ಇತಿಹಾಸ, ನವಕರ್ನಾಟಕ ಪಬ್ಲಿಕೇಶನ್ ಬೆಂಗಳೂರು – ೧೯೯೩.

೮. ಡಾ. ಹೆಚ್.ಎಸ್. ಗೋಪಾಲ್ ರಾವ್ – ನಮ್ಮ ನಾಡು ಕರ್ನಾಟಕ, ನವಕರ್ನಾಟಕ ಪಬ್ಲೀಕೇಶನ್– ಬೆಂಗಳೂರು –೧೯೯೩.

೯. ಹೆಚ್.ಎಸ್. ದೊರೆಸ್ವಾಮಿ – ನೆನಪಿನ ಸುರುಳಿ ತೆರೆದಾಗ, ಸಾಹಿತ್ಯ ಮಂದಿರ, ಬೆಂಗಳೂರು –೧೯೯೭.

೧೦. ಗರುಡನಗಿರಿ ನಾಗರಾಜ – ಸವ್ಯಸಾಚಿ, ಈಸ್ಟ್ರನ್ ಪ್ರೆಸ್, ಬೆಂಗಳೂರು, ೧೯೯೯.

೧೧. ಗರುಡನ ಗಿರಿ ನಾಗರಾಜ – ಗರುಡ ದೃಷ್ಟಿ, ಈಸ್ಟ್ರನ್ ಪ್ರೆಸ್, ಬೆಂಗಳೂರು – ೨೦೦೧, ಬಾಬು ಕೃಷ್ಣ ಮೂರ್ತಿ – ಸಂಯುಕ್ತ ಸಂಭ್ರಮ, ಲೋಕ ಶಿಕ್ಷಣ ಟ್ರಸ್ಟ್, ಬೆಂಗಳೂರು – ೨೦೦೫.

೧೨. ಹಾರನಹಳ್ಳಿ ರಾಮಸ್ವಾಮಿ – ಅಂತರಂಗದ ಧ್ವನಿ, ಲೋಕಶಿಕ್ಷಣ ಟ್ರಸ್ಟ್, ಬೆಂಗಳೂರು – ೨೦೧೦.

೧೩. ನಂ. ನಾಗಲಕ್ಷ್ಮಿ – ಸಮರದಲ್ಲಿ ಗೆಲವು ಸೋಲಿನಲ್ಲಿ ತೃಪ್ತಿ, ಹಾರನಹಳ್ಳಿ ರಾಮಸ್ವಾಮಿ, ಅಭಿನಂದನಾ ಸಮಿತಿ, ಜಯನಗರ ಬೆಂಗಳೂರು, ೨೦೦೯.

೧೪. ಬಿ.ಎಸ್. ವಿಶ್ವೇಶ್ವರಯ್ಯ – ತಾಳೆಕೆರೆ ಸುಬ್ರಹ್ಮಣ್ಯ: ಜೀವನ ಮತ್ತು ಸಾಧನೆ, ಚಿತ್ರಕಲಾ ಪರಿಷತ್, ಬೆಂಗಳೂರು – ೧೯೯೭.

೧೫. ಹೆಚ್.ಎಸ್. ದೊರೆಸ್ವಾಮಿ – ನೆನಪಿನ ಸುರುಳಿ ತೆರೆದಾಗ, ಸಾಹಿತ್ಯ ಮಂದಿರ, ಬೆಂಗಳೂರು – ೧೯೯೭.


❖ ❖ ❖

### ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
### ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಯ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |

| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ನೆಹರು ಮೈದಾನ | ಡಾ. ವಸಂತ ಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಸತೀಶ ಕೆ. | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |